MYSO_E SEED FARMS BILL 1973 INTORDUCTION

SRI D. K. NAIKER. (Minister for Law and Parliamentary Affairs).—Madam Speaker, on behalf of the Minister for Agriculture and Forests I beg to introduce the Mysore Seed Farms Bill, 1973.

MADAM SPEAKAR.—The Bill is introduced.

NYSORE PRIVATE EDUCATIONAL INSTITUTIONS DISCIPLINE* AND CONTROL) BILL, 1973 INTRODUCTION

SRI BADARI NARAYAN.(Minister for Education).—Madam Speaker I beg to introduce the Mysore Private Educational Institutions (Discipline and Control) Bill, 1973.

MADAM SPEAKER.—The Bill is introduced. *

MYSORE PROHIBITION OF BEGGARY BILL, 1973. MOTION TO CONSIDER

MYSORE PROHIBITION OF BEGGARY BILL 1973.

SRI M MALLIKARJUNASWAMY.—(Minister for Community Development and Social Welfare) : Madam, I beg to move–

> "That the Mysore Prohibition of Beggary Bill, 1973 be taken into consideration."

MADAM SPEAKER.—Motion moved –

> "That the Mysore Prohibition of Beggary Bill, 1973 be taken into consiratonde."

2-00 P.M.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.- ಮಾನ್ಯ ಅಧ್ಯಕ್ಷರೇ, ಮೈಸೂರು ಪ್ರಾಹಿಬಿಷನ್ ಆಫ್ ಬೆಗ್ಗರಿ ಬಿಲ್ಲನ್ನು ಕಳೆದ ಸಾರಿ ಈ ಸಭೆಯಲ್ಲಿ ಮಂಡಿಸಲಾಯ್ತು. ಮತ್ತೆ ಈಗ ಇದನ್ನು ಸಭೆಯ ಮುಂದೆ ಕನ್ಸಿಡರೇಷನ್‌ಗೆ ಇಡುತ್ತಾ ನಾಲ್ಕು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಬಿಕ್ಷುಕರನ್ನು ಮತ್ತು ಭಿಕ್ಷಾಟನೆಯನ್ನು ತಪ್ಪಿಸಲು ರಾಜ್ಯದಲ್ಲಿ ನಾನಾ ಭಾಗಗಳಲ್ಲಿನ ಕಾನೂನುಗಳಿದ್ದವೋ ಅವುಗಳನ್ನು ಏಕರೂಪಕ್ಕೆ ತರಲು ಈ ಮಸೂದೆ ತರಲಾಗಿದೆ. ಬಾಂಬೆ ಬೆಗ್ಗರ್ಸ್ ಆಕ್ಟ್ ೧೯೫೯ (ಬಾಂಬೆ ಆಕ್ಟ್ ೨೩ ಆಫ್ ೪೫), ದಿ ಪ್ರಿವೆನ್‌ಷನ್ ಆಫ್ ಬೆಗ್ಗರಿ ಆಕ್ಟ್, ೧೯೫೭ ಆಫ್ (ಹೈದರಾಬಾದ್ ಆಕ್ಟ್

* The Bills are appended as annexure to this Volume.

೨೦ ಆಫ್ ೧೩೫೦ ಫಸಲಿ), ದಿ ಮದ್ರಾಸ್ ಪ್ರಿವೆನ್‌ಷನ್ ಆಫ್ ಬೆಗ್ಗರಿ ಆಕ್ಟ್, ೧೯೪೫ (ಮದ್ರಾಸ್ ಆಕ್ಟ್ ೧೩ ಆಫ್ ೧೯೪೫), ಮತ್ತು ದಿ ಮೈಸೂರು ಪ್ರಾಹಿಬಿಷನ್ ಆಫ್ ಬೆಗ್ಗರಿ ಆಕ್ಟ್, ೧೯೪೪ (ಮೈಸೂರು ಆಕ್ಟ್ ೩೩ ಆಫ್ ೧೯೪೪) ಈ ೪ ಕಾನೂನುಗಳೇನು ಆಯಾ ಭಾಗದಲ್ಲಿದ್ದವು ಆ ಕಾನೂನುಗಳನ್ನು ಒಟ್ಟುಗೂಡಿಸಿ ಇಡೀ ದೇಶಕ್ಕೆ ಅನ್ವಯವಾಗುವ ರೀತಿ ಒಂದು ಯೂನಿಫಾರಂ ಬಿಲ್ಲನ್ನು ಸರಕಾರ ತಂದಿದೆ. ಈಗಾಗಲೇ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಈ ಸಿಟಿಗಳಲ್ಲಿ ಮಾತ್ರ ಎರಡು ಕೇಂದ್ರಗಳಿವೆ. ಬೆಂಗಳೂರಿನಲ್ಲಿ ೨೫೦ ಜನರಿಗೆ ಮತ್ತು ಮೈಸೂರ ಸಿಟಿಯಲ್ಲಿ ೫೦ ಜನರಿಗೆ ಮಾತ್ರ ಅವಕಾಶಮಾಡಿ ಸುಮಾರು ೩ ಲಕ್ಷ ೪ ಸಾವಿರ ರೂಪಾಯಿಗಳ ಹಣವನ್ನು ಪ್ರತಿ ವರ್ಷ ಖರ್ಚು ಮಾಡಲಾಗುತ್ತಿದೆ. ರಿಸೆಪ್ಷನ್ ಮತ್ತು ರಿಟರ್ನ್‌ಷನ್ ಆಫ್ ಬೆಗ್ಗರ್ಸ್‌ಗೆ ಇವುಗಳಲ್ಲಿ ಅವಕಾಶಮಾಡಲಾಗಿದೆ ಇದಕ್ಕಾಗಿ ೬೭ ರಲ್ಲಿ ಒಂದು ಸಲ ಕಾನೂನನ್ನು ಮಾಡಲಾಯಿತು, ಅದು ಇಡೀ ರಾಜ್ಯಕ್ಕೆ ಅನ್ವಯಿಸದಿರುವುದರಿಂದ ಎಲ್ಲೆಲ್ಲಿ ಬೇಡಿಕೆಗಳಿವೆಯೋ ಅಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಕೇಂದ್ರಗಳನ್ನು ತೆರೆದು ಸುಮಾರು ೫೦ ಜನರಿಗೊಂದು ಕೇಂದ್ರವನ್ನು ಸ್ಥಾಪಿಸಲು ಪ್ರಯತ್ನ ಮಾಡಿದ್ದೇವೆ ಇದಕ್ಕೆ ಸುಮಾರು ೬೦ ಸಾವಿರ ರೂಪಾಯಿ ಖರ್ಚಾಗುತ್ತದೆ. ಇದು ಸರಕಾರದ ಕೆಲಸ ಮಾತ್ರವಲ್ಲ, ಸಮಾಜದವರೂ ಸಹಕರಿಸಬೇಕು ಇದರ ಬಗ್ಗೆ ಸಾಕಾದಷ್ಟು ಅಂಕಿಅಂಶ ನಮ್ಮಲ್ಲಿಲ್ಲ. ಎಲ್ಲೆಲ್ಲಿ ಜೆಡ್ಯೋಗೀಕರವಾಗಿ ದೊಡ್ಡ ದೊಡ್ಡ ನಗರಗಳಿವೆ. ಅಲ್ಲಿರುವ ಪೌರಸಭೆಗಳು ಮತ್ತು ನಗರಸಭೆಗಳು ಪೂರ್ಣವಾಗಿ ಸಹಕಾರ ಕೊಟ್ಟರೆ ಮಾತ್ರ ಈ ಒಂದು ಕೆಲಸವನ್ನು ಒಳ್ಳೆಯ ರೀತಿಯಿಂದ ಮಾಡಲು ಸಾಧ್ಯ. ಈ ಬಿಲ್ಲಿಗೆ ಸಂಬಂಧಪಟ್ಟ ಕ್ಲಾಜುಗಳ ಮೇಲೆ ಚರ್ಚೆಯಾಗುವಾಗ ನಾನು ಉತ್ತರ ಕೊಡುತ್ತೇನೆ. ಕಾನೂನಿನಮೇಲೆ ಚರ್ಚೆಯಾದಮೇಲೆ ಉತ್ತರ ಕೊಡುವಾಗ ಉಳಿದ ವಿಚಾರಗಳನ್ನು ಹೇಳುತ್ತೇನೆ. ಇಷ್ಟು ತಿಳಿಸಿ ಈ ಸಭೆ ಈ ಮಸೂದಾ ಕಾನೂನಿಗೆ ಇಪ್ಪಿಗೆ ಕೊಡಬೇಕೆಂದು ವಿನಂತಿಮಾಡಿಕೊಂಡು ಈ ಮಸೂದೆಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ಈ ಕಾನೂನು ವ್ಯಾಪ್ತಿಗೊಳಪಡುವಂತೆ ಎಷ್ಟು ಭಿಕ್ಷುಕರಿದ್ದಾರೆ ಎಂದು ಅಂದಾಜು ಮಾಡಿರುವರೇ ? ಅವರ ಪುನರ್ವ್ಯವಸ್ಥೆಗೆ ಎಷ್ಟು ಹಣ ಬೇಕು? ಇದನ್ನು ತಿಳಿಸಿದರೆ ಚರ್ಚೆಗೆ ಅನುಕೂಲ .

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಫೈನಾನಷಿಯಲ್ ಮೆಮೊರ್ಯಾಂಡಂನಲ್ಲಿ ವಿಷಯ ತಿಳಿಸಿದ್ದೇವೆ. ಬಹುಶಃ ಬಿಲ್ಲನ್ನು ಓದಿದರೆ ಅದು ಅರ್ಥವಾಗುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಮಸೂದೆಯನ್ನು ಮಾಡಿದವರು ಎಷ್ಟು ಜನ ಭಿಕ್ಷುಕರಿದ್ದಾರೆ? ಎಷ್ಟು ಜನರಿಗೆ ಈ ಕಾನೂನು ಅನ್ವಯವಾಗುವುದು, ಎಷ್ಟು ಜನರು ಇದರ ಕಕ್ಷೆಯಲ್ಲಿ ಬರುವರು ಎಂಬ ಅಂಕಿ ಅಂಶ ತಿಳಿಸಬೇಕಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಹೇಳಿದೆ, ಅಂಕಿಅಂಶ ಇಲ್ಲವೆಂದು ಮೊದಲೇ ಹೇಳಿದೆ. ಆಗ ಮಾನ್ಯ ಸದಸ್ಯರಿಗೆ ಯಾವ ಕಡೆ ಗಮನವಿತ್ತೋ ಏನೋ.

ಶ್ರೀ ಕೋಣಂದೂರು ಲಿಂಗಪ್ಪ.—ಅಂಕಿಅಂಶವಿಲ್ಲದ ಕಾನೂನು ಮಾಡಿದರೆ ಹೇಗೆ?

† ಶ್ರೀ ಟಿ. ಆರ್. ರಾಮಣ್ಣ (ಕೋಟೆ).—ಮಾನ್ಯ ಸಭಾಧ್ಯಕ್ಷಣಿಯರೇ, ಈಗ ನಮ್ಮ ಮುಂದೆ ತಂದಿರುವ ಮೈಸೂರು ಪ್ರಾಹಿಬಿಷನ್ ಆಫ್ ಬೆಗ್ಗರಿ ಬಿಲ್, ೧೯೭೩ ಇದರ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ. ನನಗಾದರೂ ಆನ್ನಿಸುತ್ತದೆ, ಈ ಬಿಲ್ಲನ್ನು ತರುವುದಕ್ಕೆ ಮುಂಚೆ ಪೊಲಿಟಿಕಲ್ ಬೆಗ್ಗರ್ಸ್ ಬಗ್ಗೆ ಒಂದು ಬಿಲ್ಲನ್ನು ತಂದಿದ್ದರೆ ಚೆನ್ನಾಗಿತ್ತು ಎಂದು. ಏಕೆಂದರೆ ಅವರು ಓಟಿನ ಸಂದರ್ಭದಲ್ಲಿ ಹಣ ವಸೂಲು ಮಾಡುವರು, ಸರಕಾರಕ್ಕೆ ಅನುಕೂಲವಾಗುವುದು. ಚುನಾವಣೆ ಸಮಯದಲ್ಲಿ ಅದರಿಂದ ಖರ್ಚುಮಾಡಲು ಹಣ ಸಹಾಯ ದೊರೆಯುವುದು; ಬೇಕಾದಷ್ಟು ಅನುಕೂಲವಾಗುವುದು.

ಅಧ್ಯಕ್ಷೆಯರು.—ಹೀಗೆ ಹೇಳಿದರೆ ಅದು ನಮ್ಮ ಅನುಭವ ಎಂದು ಹೇಳಬೇಕಾಗುತ್ತದೆ. ಹೀಗೆ ಮಾತನಾಡಿದರೆ ಹೇಗೆ?

ಶ್ರೀ ಟಿ. ಆರ್. ರಾಮಣ್ಣ.—ನಾನು ಸೆಂಟ್ರಲ್ ಬೆಗ್ಗರ್ಸ್ ರಿಲೀಫ್ ಕಮಿಟಿಯಲ್ಲಿ ಕಳೆದು ೪ ವರ್ಷಗಳಿಂದ ಸದಸ್ಯನಾಗಿರುವುದರಿಂದ ನನಗೆ ಕೆಲವು ಅಂಶಗಳು ಗೊತ್ತಿವೆ. ಅದರ ಬಗ್ಗೆ ನಾನು ಈಗ ಪ್ರಸ್ತಾಪ ಮಾಡಬೇಕಾಗಿದೆ. ಬೆಗ್ಗರ್ ಎಂಬುದಕ್ಕಿರುವ ಡೆಫಿನಿಷನ್‌ನಲ್ಲಿ ಮಗುವನ್ನು ಬಿಟ್ಟಿದ್ದಾರೆ. "ಅದೆತ್ ದ್ಯಾನ್ ಎ ಚೈಲ್ಡ್" ಎಂದು ತಿಳಿಸಿದ್ದಾರೆ. ಚೈಲ್ಡನ್ನು ಕಾನೂನು ವ್ಯಾಪ್ತಿಯಿಂದ ತೆಗೆದಿದ್ದಾರೆ. ಮಕ್ಕಳ

(ಶ್ರೀ ಟಿ. ಆರ್. ಶಾಮಣ್ಣ)

ಬಗ್ಗೆ ಏನು ವ್ಯವಸ್ಥೆ ಮಾಡುವರು ಎಂಬ ವಿಚಾರ ಹೇಳದಿರುವದು ಶೋಚನೀಯವಾದ ವಿಚಾರ. ಮತ್ತು ಈ ಭಿಕ್ಷಾಟನೆ ನಿರ್ಮೂಲದ ಮಸೂದೆಯಲ್ಲಿ 'ಭಿಕ್ಷುಕ' ಎಂದರೆ ಯಾರು ಎಂಬ ಪದದ ಅರ್ಥವಿವರಣೆಯಲ್ಲಿ ಹೀಗೆ ಹೇಳಿದಾರೆ :—

> "(a) solicits or receives alms in a public place whether or not under any pretence such as singing, dancing, fortune-telling, performing tricks or selling articles;"

ಹೀಗೆಲ್ಲಾ ಹೇಳಿರುವುದರಿಂದ ಈ ಮಸೂದೆಯ ವ್ಯಾಪ್ತಿಯಲ್ಲಿ—ದೊಂಬರು, ಕೋತಿ ಆಡಿಸತಕ್ಕವರು ಮತ್ತು 'ಈ ಬೊಂಬಾಯಿ ನೋಡ್, ಈ ಮದ್ರಾಸ್ ನೋಡ್' ಎನ್ನತಕ್ಕ ಜನರನ್ನೂ ತೆಗೆದುಕೊಂಡು ಬರುವಹಾಗೆ ಕಾಣುತ್ತಿದೆ. ಇಲ್ಲಿ ಸಿಂಗಿಂಗ್; ಡ್ಯಾನ್ಸಿಂಗ್ ಮತ್ತು ಫಾರ್‌ಚೂನ್ ಟೆಲ್ಲಿಂಗ್ ಇತ್ಯಾದಿಯವರನ್ನೆಲ್ಲಾ ಸೇರಿಸಿರುವುದರಿಂದ—ಇವರಲ್ಲಿ ಯಾರು ಕೆಲವರು ಹಾಡಿ ದುಡ್ಡನ್ನು ಸಂಪಾದನೆ ಮಾಡಿ ತಮ್ಮ ಜೀವನ ನಡೆಸುತ್ತಿದ್ದಾರೋ ಅಂಥವರನ್ನೂ ಇದರಲ್ಲಿ ಅಡಕ ಮಾಡಿರುವುದು ಸಾಧುವಾದುದಲ್ಲ. ಆದರೆ ಈ ಮಸೂದೆಯ ವ್ಯಾಪ್ತಿಯಲ್ಲಿ ನ್ಯಾಯವಾಗಿ ಯಾರು ಬರಬೇಕು ಎಂದರೆ ಯಾರು ದೇಹವನ್ನು ದಂಡಿಸಿ ಕಷ್ಟಪಡದೆ ಜನರನ್ನು ಶೋಷಣೆ ಮಾಡಿ ಜೀವನ ಮಾಡುತ್ತಿದ್ದಾರೋ ಅಂಥವರನ್ನು ಇದರ ವ್ಯಾಪ್ತಿಯಲ್ಲಿ ತರಬೇಕಾದ್ದು ನ್ಯಾಯ.

ಆದರೆ ಇಲ್ಲಿ ಮುಖ್ಯವಾಗಿ ಈ ಮಸೂದೆಯನ್ನು ತರತಕ್ಕ ಸರ್ಕಾರದವರ ಉದ್ದೇಶವೇನೆಂದರೆ ಜನರ ಮೇಲೆ ಈ ಭಿಕ್ಷಾಟನೆಯನ್ನು ನಿಲ್ಲಿಸತಕ್ಕ ನೆಪದಲ್ಲಿ ಜನರ ಮೇಲೆ ಒಂದು ಸೆಸ್‌ನ್ನು ಹೇಳಿಬೇಕೆಂಬ ದೇ ಇದರ ಉದ್ದೇಶ. ಇದು ಸಾಧುವಾದುದಲ್ಲ. ಈ ಹಾಗಲೇ ಜನರ ಮೇಲೆ ಸರ್ಕಾರದವರು ಎಜುಕೇಷನ್ ಸೆಸ್, ಹೆಲ್ತ್ ಸೆಸ್ ಮತ್ತು ಲೈಬ್ರೆರಿ ಸೆಸ್ ಹೀಗೆ ಅನೇಕ ಸೆಸ್ಸುಗಳನ್ನು ಹಾಕಿದ್ದಾರೆ. ಜನರಿಗೆ ಆ ಸೆಸ್ಸುಗಳ ಭಾರವನ್ನೇ ಹೊರುವುದಕ್ಕಾಗದಿರುವಾಗ ಮತ್ತೆ ಜನರ ಮೇಲೆ ಈ ಒಂದು ತೆರಿಗೆಯನ್ನು ಹೇರುವದಕ್ಕೆ ಹೊರಟಿರುವುದು ಖಂಡನೀಯ. ದೇಶದಲ್ಲಿ ಈ ಭಿಕ್ಷಾಟನೆಯನ್ನು ನಿರ್ಮೂಲ ಮಾಡತಕ್ಕ ಬಗ್ಗೆ ಸರ್ಕಾರ ನಿರಾಶ್ರಿತರಾದ ಜನರಿಗೆ ಉದ್ಯೋಗವ್ಯವಸ್ಥೆಗಳನ್ನ ಕಲ್ಪಿಸಿಕೊಟ್ಟು, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿರುವಂತೆ ವಯಸ್ಸಾದವರಿಗೆ ಮತ್ತು ಅಂಗವಿಕಲರಿಗೆ ಆಶ್ರಮಗಳನ್ನು ಮಾಡಿಕೊಟ್ಟರೆ ಇದು ತಾನಾಗೇ ತಪ್ಪುತ್ತದೆ. ಇದಕ್ಕೆ ಕಾನೂನಿನ ಆಗತ್ಯವೇ ಇರುವುದಿಲ್ಲ ಅದನ್ನು ಮಾಡದೆ ಜನರ ಮೇಲೆ ರಿಗೆ ಹೇರಲು ಈ ಒಂದು ನೆಪವನ್ನು ಹುಡುಕಿರುವುದು ಖಂಡನೀಯವಾದದ್ದು

ಇಲ್ಲಿ ಈ ಭಿಕ್ಷಾಟನೆಯ ನಿರ್ಮೂಲದ ಶಾಸನವನ್ನು ತಂದು ಬಹಳ ವರ್ಷಗಳಾಯಿತು ಆದರೆ ಇಲ್ಲಿ ಭಿಕ್ಷುಕರ ಹಾವಳಿಯೇನೂ ಕಡಿಮೆಯಾಗಿರುವುದಿಲ್ಲ. ಹಿಂದೆ ಶ್ರೀಮಾನ್ ಬಸವಲಿಂಗಪ್ಪನವರಿದ್ದಾಗ ಈ ಬೆಗ್ಗರ್ಸ್ ಹೋಂ ಕೆಲಸಗಳು ಸ್ವಲ್ಪ ಚುರುಕಾಗಿ ನಡೆಯುತ್ತಿತ್ತು. ಆದರೆ ಈಗ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳೂ ಕೂಡ ಮುತವರ್ಜಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ಈ ಬೆಗ್ಗರ್ಸ್ ಹೋಂಗೆ ವರ್ಷಕ್ಕೆ ಮೂರೂವರೆ ಲಕ್ಷ ರೂ.ಗಳು ಖರ್ಚಾಗುತ್ತಿದ್ದರೂ ಇಲ್ಲಿ ಭಿಕ್ಷುಕರ ಹಾವಳಿ ಮಾತ್ರ ತಪ್ಪಿಲ್ಲ. ಇದನ್ನು ಸಂಪೂರ್ಣವಾಗಿ ತಪ್ಪಿಸಲು ಸರ್ಕಾರದವರು ಏನು ಯೋಜನೆಯನ್ನು ಮಾಡಿದ್ದಾರೆಂಬುದನ್ನು ಇವರಲ್ಲಿ ತಿಳಿಸಿಲ್ಲ. ಆದರೆ ಈ ಬಿಲ್ಲಿನಲ್ಲಿ ಬೆಗ್ಗರ್ಸ್ ಯಾರು ಎಂಬುದನ್ನು ಹೇಳುವಾಗ— ಮದುವೆ ಮತ್ತು ಜಾರ್ಜುಗಳಲ್ಲಿ ಸಂತರ್ಪಣೆ ಊಟಗಳನ್ನು ನಡೆಸಿದಾಗ ಅಲ್ಲಿ ಜನರು ಊಟ ಮಾಡಿ ಎಸೆಯತಕ್ಕ ಎಂಜಲು ಎಲೆಗಳಲ್ಲಿರತಕ್ಕ ಅನ್ನದ ಅಗುಳುಗಳನ್ನು ಸಕ್ಕುವುದಕ್ಕೆ ನಾಯಿಯಂತೆ ಬಾಧಾಂಡಿಗರಾದ ಜನರೇನು ಬಂದು ಅಲ್ಲಿ ಕಜ್ಜಾಡುತ್ತಿದ್ದಾರೆ ಆ ಜನರನ್ನು ಇದರ ವ್ಯಾಪ್ತಿಯಲ್ಲಿ ತಾರದೆ ಯಾರೋ ಕೆಲವರು ಜನರಿಗೆ ಒಂದು ಮನರಂಜನೆ ಮಾಡಿ ಹೊಟ್ಟೆ ಹೊರೆಯತಕ್ಕವರನ್ನು ಇದರಲ್ಲಿ ಸೇರಿಸಿರುವುದು ತುಂಬಾ ಶೋಚನೀಯ. ಆದಕ್ಕಾಗಿ ನಾನು ಒಂದು ತಿದ್ದುಪಡಿಯನ್ನೇ ತಂದಿದ್ದೇನೆ.

ಇನ್ನು ಈ ಮಸೂದೆಯಲ್ಲಿ ಈ ರಿಜಿಯನ್ ಮೆಂಡಿಕೆಂಟ್ಸ್ ಎಂಬತಕ್ಕವರಿಗೆ ವಿನಾಯಿತಿಗಳನ್ನೂ ಕೊಡಲಾಗಿದೆ. ಆದರೆ ಕೇವಲ ತಿರುಪತಿ ವೆಂಕಟರಮಣ ಸ್ವಾಮಿಗೆ ಯಾತ್ರೆ ಹೊರಟವರಂತೆ ಅರಿಸಿನದ ಬಟ್ಟೆಯನ್ನುಟ್ಟು ನಟಿಸಿ ಆ ಕಾರಣಕ್ಕೆಯನ್ನು ವೆಂಕಟರಮಣನಿಗೆ ಕೊಡದೆ ತಮಗೇ ಅರ್ಪಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಸರ್ಕಾರದವರೇ ಜನರಿಗೆ ಒಂದು ರೀತಿಯಲ್ಲಿ ತಿರುಪೆ ಮಾಡುವುದಕ್ಕೆ ಉತ್ತೇಜನವನ್ನು ಕೊಟ್ಟಂತಾಗುತ್ತದೆ. ಆದುದರಿಂದ ಇದಕ್ಕೆ ಒಂದು ಸರಿಯಾದ ತಿದ್ದುಪಡಿಯನ್ನು ಸೇರಿಸಿ ಇದನ್ನು ಸರಿಪಡಿಸಬೇಕು.

ಇನ್ನು ಮಕ್ಕಳನ್ನು ಈ ಮಸೂದೆಯಿಂದ ವಿನಾಯಿತಿ ಮಾಡಿದ್ದಾರೆ. ಇದೂ ಕೂಡ ಸರಿಯಲ್ಲ. ಬಾಲದಲ್ಲೇ ಅವರು ತಿರುಪೆ ಎತ್ತುವುದನ್ನು ಕಲಿತ ಮೇಲೆ ಅವರು ದೊಡ್ಡವರಾದ ಮೇಲೆ ಬಿಡುತ್ತಾರೆಯೇ? ಆದುದರಿಂದ ಮಕ್ಕಳು ಭಿಕ್ಷಾಟನೆ ಮಾಡುತ್ತಿರುವುದನ್ನು ಕಂಡಾಗ ಅವರನ್ನು ಕೂಡಲೇ ರಿಮಾಂಡ್ ಹೋಮಿಗೆ ಇಲ್ಲವೇ ಸರ್ಟಿಫೈಡ್ ಸ್ಕೂಲ ಗಳಿಗೆ ಸೇರಿಸಬೇಕಾದ್ದು ಅತ್ಯಗತ್ಯ ಎಂದು ಹೇಳುತ್ತೇನೆ. ಆದುದರಿಂದ ಮಕ್ಕಳನ್ನು ಇವರ ವ್ಯಾಪ್ತಿಯಿಂದ ತೆಗೆಯಬಾರದೆಂದು ಒತ್ತಾಯ ಮಾಡುತ್ತೇನೆ.

ಇನ್ನು ಸರ್ಕಾರಕ್ಕೆ ಇತಿಹಾಸದಿಂದ ದೊಡ್ಡ ರೋಗಬಂದಿದೆ. ಅದೇನೆಂದರೆ ಈ ಬೆಗ್ಗರ್ ರಿಲೀಫ್ ಕಮಿಟಿಯಲ್ಲಿ ಕೆಲಸ ಮಾಡತಕ್ಕ ಸದಸ್ಯರನ್ನು ಅದಕ್ಕೆ ಸೇರಿಸಿಕೊಳ್ಳತಕ್ಕ ವಿಚಾರದಲ್ಲೂ ಇವರ ದೊಡ್ಡಸ್ತಿಕೆ ತಪ್ಪುವಂತಿಲ್ಲ. ಇಲ್ಲಿ ಹೀಗೆ ಹೇಳಿದ್ದಾರೆ :—

> "Members of the Comm ttee shall be appointed by the Gover ment and hold office during the pl asure of the Government."

ಇದೊಂದು ಸೋಷಿಯಲ್ ವರ್ಕ್ ಇದರಲ್ಲಿ ಯಾರಿಗೇನು ಸಂಪಾದನೆ ಇದೆ? ಆದಾಗ್ಯೂ ಇಲ್ಲಿ "ಡ್ಯೂರಿಂಗ್ ದಿ ಪ್ಲಜರಾಫ್ ದಿ ಗೌರ್ನಮೆಂಟ್" ಎಂದು ಹೇಳಿದ್ದಾರೆ ಹೀಗಾದರೆ ಇದಕ್ಕೆ ಯಾರು ಮಾರಾ ದಸ್ತರು ಬಂದು ಕೆಲಸ ಮಾಡುತ್ತಾರೆ? ಆದ್ದರಿಂದ ಹೀಗೆ ಹೇಳಿರುವುದು ಸರಿಯಾದುದಲ್ಲ ಹಾಗೆ ತಿರುಪೆ ಕಮಿಟಿಯಲ್ಲಿರತಕ್ಕವರನ್ನು ಕಿತ್ತುಹಾಕುವ ಪಕ್ಷಕ್ಕೆ ಅದಕ್ಕೆ ಸದಸ್ಯರೇಕೆ ಬೇಕು, ಸರ್ಕಾರದವರೇ ನಡೆಸಿಕೊಂಡು ಬರಲಿ ಯಾರೂ ಬೇಡವೆನ್ನುವುದಿಲ್ಲ. ಆದರೆ ಇದು ಸರ್ಕಾರದವರ ಒಂದು ಸ್ವೇಚ್ಛಾ ಮನೋಭಾವವನ್ನು ತೋರಿಸುತ್ತದೆ. ಆದುದರಿಂದ ಈ ಕ್ಲಾಜನ್ನೇ ತೆಗೆದು ಹಾಕಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ದೇಶದಲ್ಲಿ ಈ ಭಿಕ್ಷುಕರ ಮೂಲಭೂತವಾದ ಒಂದು ಸಮಸ್ಯೆ ಎಂದರೆ ಇಲ್ಲಿ ತಿರುಪೆ ಮಾಡತಕ್ಕವರಲ್ಲಿ ಶೇಕಡಾ ೭೦ರಷ್ಟು ಜನರು ಇಲ್ಲಿಗೆ ನೆರೆರಾಷ್ಟ್ರಗಳಿಂದ ಬಂದವರು. ಮೈಸೂರಿನವರು ಅಷ್ಟು ತಿರುಪೆ ಮಾಡುತ್ತಿಲ್ಲ. ಇವರಲ್ಲಿ ಸ್ವಲ್ಪ ಸ್ವಾಭಿಮಾನವಿದೆ ಇವರು ಎಷ್ಟೇ ಕಡುಬಡವರಾಗಿದ್ದರೂ ಭಿಕ್ಷಕ್ಕೆ ಹೋಗುವುದು ಇವರಿಗೆ ಒಗ್ಗದು. ಆದರೆ ಇಲ್ಲಿ ಕೇವಲ ೨ ಇತ್ತೀಚೆಗೆ ಕೈ ಇಲ್ಲದ ಕಾಲಿಲ್ಲದ ಕಣ್ಣಿಲ್ಲದ ಜನರನ್ನು ಕೊಂಡು ಮಾರಾಟ ಮಾಡುವ ಕೆಲಸ ನಡೆಯುತ್ತಿದೆಯೆಂದು ಕೇಳುತ್ತಿದ್ದೇನೆ. ಇಲ್ಲಿ ಭಿಕ್ಷೆಮಾಡತಕ್ಕ ಕೆಲವು ಜನರಲ್ಲಿ ಸಾವಿರ ಗಟ್ಟಲೆ ಸಂಪಾದನೆಯಿರುತ್ತವೆಂದು ಹೇಳುತ್ತಿದ್ದಾರೆ. ಆದರೆ ಜನರಿಗೆ ತಿರುಪೆ ಮಾಡಲು ಉತ್ತೇಜನ ಕೊಡತಕ್ಕ ಜನರನ್ನು ಅರೆಸ್ಟ್ ಮಾಡಬೇಕೆಂದು ಇಲ್ಲಿ ಸೂಚಿಸಿರತಕ್ಕದ್ದು ಸ್ವಾಗತಾರ್ಹವಾದದು.

Clause 11 : "arrest and enquiry.—(1) Any police officer or such other officer as may be authorised by Government in this behalf by general or special order who finds any person other than a child contravening the provisions of section 3 shall arrest such person and inform him of the grounds for such arrest and remove him immediately to the nearest receiving centre."

ಆದ್ದರಿಂದ ಪೋಲೀಸಿನವರಿಗೆ ಈಗ ಏನೋಂದು ಅವಕಾಶವಿದೆಯೆಂದರೆ, ಅನೇಕ ಸಂದರ್ಭಗಳಲ್ಲಿ ಯಾರ್ಯಾರೋ ಶ್ರೀಮಂತರು ತಿರುಪೆಯವರು ಎಂಬುದಾಗಿ ತಿಳಿದು ಅಂತಹವರನ್ನೂ ಸಹ ಅವರಿಗೆ ತೆಗೆದುಕೊಂಡು ಹೋಗಿರುವ ನಿದರ್ಶನಗಳೂ ಸಹ ಇವೆ. ಆದ್ದರಿಂದ ತಿರುಪೆ ಮಾಡದೇ ಇರುವವನ್ನು ಇನ್ನು ಮುಂದೆ ವಿವೇಚನೆಯಿಂದ ಯೋಚನೆಮಾಡಿ ಅಂತಹವರನ್ನು ಅರೆಸ್ಟ್ ಮಾಡದೇ ಇರುವ ಹಾಗೆ ತಕ್ಕ ಕಾನೂನುಗಳನ್ನು ಇದರಲ್ಲಿ ಮಾಡಬೇಕು ಮೊಟ್ಟಮೊದಲು ಅಂತಹವನು ಅರೆಸ್ಟ್ ಮಾಡಿದಕೂಡಲೇ ಅವರನ್ನು ಮ್ಯಾಜಿಸ್ಟ್ರೇಟ್ ಮುಂದೆ ಪ್ರೊಡ್ಯೂಸ್ ಮಾಡಬೇಕು. ಅವರು ಬೆಗ್ಗರ್ ಎಂದು ತೀರ್ಮಾನದ ಮೇಲೆ ಅವರಿಗೆ ಕೂಡಲೇ ಒಂದು ವಾರ್ನಿಂಗ್ ಕೊಡಬೇಕು. ಆ ರೀತಿಯಾಗಿ ವಾರ್ನ್ ಮಾಡಿದಮೇಲೆ ಅವರು ಅಲ್ಲಿಂದ ಬಿಡಿಸಿಕೊಂಡು ಹೋದಮೇಲೆ ಮತ್ತೆ ಪುನಃ ಭಿಕ್ಷೆ ಮಾಡಲಿಕ್ಕೆ ಹೊಂದರೆ ಆಗ ಅವರಿಗೆ ಶಿಕ್ಷೆ ಮಾಡಬೇಕು. ತಿರುಪೆ ಮಾಡುವವರು ಎಷ್ಟು ಮಂದಿ ಸಾಮಿಹಾರಿಕೊಂಡು ಅಂತಹವರಿಗೆ ಆರು ತಿಂಗಳು ಸಜಾ ವಿಧಿಸಬೇಕೆಂದು ಇದರಲ್ಲಿ ಹೇಳಿದೆ. ಈ ಆರು ತಿಂಗಳು ಎಂಬುದಾಗಿ ಹೇಳುವುದು ಸರಿಯಾದುದಲ್ಲ. ಈ ರೀತಿಯಾದಂಥ ಪಾದವನ್ನು ಇಟ್ಟುಕೊಂಡು ತಿರುಪೆ ಮಾಡುವವನನ್ನು ಜೈಲಿನಲ್ಲಿ ಮೂರು ತಿಂಗಳೋ, ಅಥವಾ ಆರು ತಿಂಗಳೋ ಇಟ್ಟುಕೊಂಡು ಬಿಟ್ಟುಬಿಟ್ಟರೆ ಅವರು ಪುನಃ ೬ ತಿಂಗಳಾದ ಮೇಲೆ ಅದೇ ವೃತ್ತಿಯನ್ನು ಅನುಸರಿಸುತ್ತಾರೆ. ಆದ್ದರಿಂದ ತಿರುಪೆ ಮಾಡುವವನನ್ನು ಕೂಡಲೇ

(ಶ್ರೀ ಟಿ. ಆರ್. ಶಾಮಣ್ಣ)

ಬೆಗ್ಗರ್ ರಿಲೀಫ್ ಕಾಲೋನಿಗೆ ಕರೆದುಕೊಂಡು ಹೋಗಿ ಅಲ್ಲಿ ತರಬೇತುಮಾಡಿ ಅವರು ಅವರ ಕಾಲಿನ ಮೇಲೆ ನಿಂತು ಕೊಳ್ಳುವ ಹಾಗೆ ಶಿಕ್ಷಣವನ್ನು ಕೊಡಬೇಕು. ಅದನ್ನು ಮಾಡುವುದಕ್ಕೆ ಹೆಚ್ಚು ಕಾಲಾವಕಾಶ ಬೇಕಾಗುತ್ತದೆ. ಅವರಿಗೆ ಬೈಂಡಿಂಗ್ ವರ್ಕ್ಸ್, ವೀವಿಂಗ್ ಮತ್ತು ಕಾರ್ಪೆಂಟಿಗ್ ಮುಂತಾದ ಕುಶಲ ವಿದ್ಯೆಗಳನ್ನು ಕಲಿಸಿಕೊಟ್ಟು ಅವರ ಸಹ ಎಲ್ಲರಂತೆ ಸರಿಯಾಗಿ ಈ ರಾಜ್ಯದಲ್ಲಿ ಕೆಲಸಮಾಡಿ ಅವರ ಕಾಲಿನ ಮೇಲೆ ನಿಂತು ಸಂಪಾದನೆಮಾಡತಕ್ಕ ಶಕ್ತಿಯನ್ನು ಅವರಿಗೆ ಸರ್ಕಾರದವರು ಒದಗಿಸಿಕೊಡಬೆ ಕು, ಕೇವಲ ೬ ತಿಂಗಳು ಆಂಥಾದಕ್ಕೆ ಸಾಕಾಗುವುದಿಲ್ಲ. ಈ ಒಂದು ಕಾಲಾವಧಿಯನ್ನು ಕೆಲವಾರು ಸಂದರ್ಭಗಳಲ್ಲಿ ಹೆಚ್ಚಿಸಬೇಕಾಗಿ ಬರುತ್ತದೆ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆದ್ದರಿಂದ ಅವರು ಅವರ ಸ್ವಸಕ್ತಿ ಯಿಂದ ಸಂಪಾದನೆ ಮಾಡಬೇಕಾಗಿದೆ. ಅವರಿಗೆ ಹೆಚ್ಚಿಗೆ ಕಾಲಾವಕಾಶ ಬೇಕಾಗುತ್ತದೆ. ಅವರಿಗೆ ಅವರ ಒಂದು ವೃತ್ತಿಯಲ್ಲಿ ಸ್ವಾಭಿಮಾನ ಬರುವುದಕ್ಕೆ ಅವರು ಸ್ವಶಕ್ತಿಯಿಂದ ಸಂಪಾದನೆಮಾಡಿ ಅವರು ಅವರ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಅನುಕೂಲ ಮಾಡಿಕೊಡುವುದಕ್ಕೆ ಈ ಕಾನೂನು ಪ್ರಕಾರ ೬ ತಿಂಗಳಿಗೆ ಬದಲಾಗಿ ಒಂದು ವರ್ಷವಾದರೂ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕ ವಾಗಿ ಹೇಳುತ್ತೇನೆ. ಕಣ್ಣು ಇಲ್ಲದೇ ಇರುವವರು, ಜೀವನ ಮಾಡುವುದಕ್ಕೇ ಆಗದೆ ಅಂಗವಿಕಲರಾಗಿರು ವವರನ್ನು ಮಾತ್ರ ಬೆಗ್ಗರ್ಸ್ ಎಂಬುದಾಗಿ ಟ್ರೀಟ್ ಮಾಡಬೇಕಾಗಿದೆ. ಆದರೆ ದುಡಿಯುವುದಕ್ಕೆ ಹೆಚ್ಚಿಗೆ ಶಕ್ತಿ ಇರುವವರನ್ನು ಬೆಗ್ಗರ್ಸ್ ಎಂಬುದಾಗಿ ಪರಿಗಣೆ ಮಾಡಬಾರದು. ಅಂತಹವರು ಈ ಒಂದು ವೃತ್ತಿಗೆ ಇಳಿದರೆ, ಅವರಿಗೆ ಹೆಚ್ಚಿಗೆ ಶಿಕ್ಷೆಮಾಡಿ, ಅವರಿಗೂ ಜೀನ್ಸಾಗಿ ದುಡಿಯುವ ಮನೋಭಾವವನ್ನುಂಟುಮಾಡ ಬೇಕು. ಅವರನ್ನು ಸೋಮಾರಿಗಳನ್ನಾಗಿ ಮಾಡಬಾರದು. ಆದರೆ ಯಾವುದೇ ಕಾರಣದಿಂದ ದುಡಿಯು ವುದಕ್ಕೆ ಶಕ್ತಿ ಇದ್ದರೂ ತಿರುಪೆಯವರು ಎಂದು ಹೇಳಿಕೊಂಡು ಈ ಒಂದು ವೃತ್ತಿಯನ್ನು ಅವಲಂಬಿಸಿದರೆ, ಅಂತಹವರನ್ನು ಕ್ರಿಮಿನಲ್ ಎಂದು ಭಾವಿಸಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಅಂತಹವರಿಗೆ ಕಠಿಣವಾದ ಶಿಕ್ಷೆಯನ್ನು ಕೊಟ್ಟು ಅವರ ಸೋಮಾರಿತನವನ್ನು ತಪ್ಪಿಸಿ ಅವರು ಮುಂದೆ ಬೇಡುವ ಮನೋಭಾವನೆಯನ್ನು ತಪ್ಪಿಸುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ನಾನು ಈ ಸಂದರ್ಭ ದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ನನ್ನ ಮತ್ತೊಂದು ಸಲಹೆಯೇನೆಂದರೆ, ಆನೇಕ ಜನರು ಈಗ ಬೇರೆಬೇರೆ ರಾಜ್ಯಗಳಿಂದ ಭಿಕ್ಷುಕರಾಗಿ ಬಂದಿರುವವರಾಗಿದ್ದಾರೆ. ಯಾರಾದರೂ ಇಲ್ಲಿಗೆ ಬೇರೆ ರಾಜ್ಯ ಗಳಿಂದ ಭಿಕ್ಷುಕರಾಗಿ ಬಂದು ತಿರುಪೆ ಮಾಡಿದರೆ, ಅಂಥಹವರನ್ನು ಅವರ ರಾಜ್ಯಕ್ಕೇ ಹಿಂದಕ್ಕೆ ಕಳುಹಿಸಿ ಕೊಡುವುದಕ್ಕೆ ಅನುಕೂಲವಾಗುತ್ತದೆಯೇ ಎಂಬುದನ್ನು ಯೋಚನೆಮಾಡಬೆ ಕು. ಏಕೆಂದರೆ ಇಲ್ಲಿರತಕ್ಕ ಭಿಕ್ಷುಕರನ್ನು ಮರೆತು, ಬೇರೆ ರಾಜ್ಯಗಳವರ ಭಿಕ್ಷುಕರಿಗೆ ಹೆಚ್ಚಿನ ಅನುಕೂಲಗನ್ನು ಈಗ ಒದಗಿಸಿಕೊಡು ತ್ತಿದ್ದಾರೆ ಅದು ಸರಿಯಲ್ಲ. ನಮ್ಮಲ್ಲಿಗೆ ಒಂದು ಹೆಚ್ಚಿಗೆ ಸ್ವಯಂ ಏರಿಯಗಳನ್ನು ಕ್ರಿಯೇಟ್ ಮಾಡು ವವರೇ ಬೇರೆ ರಾಜ್ಯಗಳವರು. ಇಲ್ಲಿ ತಿರುಪೆ ಮಾಡುವವರಲ್ಲಿ ಹೆಚ್ಚಿಗೆ ಇರುವವರು ಬೇರೆಬೇರೆ ರಾಜ್ಯ ಗಳವರು. ಅವರು ಒಂದು ಅನುಕೂಲಕ್ಕಾಗಿ ನಮ್ಮ ಮೇಲೆ ಸಸ್ಪೆಗಳನ್ನು ಹಾಕಿ ನಮ್ಮ ದುಡ್ಡನ್ನು ಅವರ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚುಮಾಡುವು ದಕ್ಕೆ ಬದಲಾಗಿ ಅಲ್ಲಿಂದ ಬಂದಂಥ ತಿರುಪೆಗಾರರು ಮತ್ತೆ ನಮ್ಮಲ್ಲಿಗೆ ಬಾರದೇ ಇರುವ ಹಾಗೆ ಅವರನ್ನು ಕೂಡಲೇ ಅ ಸ್ಥಳಮಾತ್ರ ಅವರು ಎಲ್ಲಿಂದ ಬಂದಿದ್ದಾರೋ ಆಯಾ ಸ್ಥಳಗಳಿಗೆ ಕಳುಹಿಸಿವ ವ್ಯವಸ್ಥೆಯನ್ನು ಮಾಡಬೇಕು ಹಾಗೂ ಅಂತಹವರು ಪುನಃ ಇಲ್ಲಿಗೆ ಬಾರದೇ ಇರುವುದಕ್ಕೆ ತಕ್ಕ ಒಂದು ಕಾನೂನನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೆನೆ. ನಾನು ಮೊದಲಿನಿಂದಲೂ ನೋಡಿರುವ ಹಾಗೆ ಕೆಲವಾರು ಸ್ಥಳ ಗಳಲ್ಲಿ ಈ ತಿರುಪೆ ಮಾಡಿರವವರಲ್ಲಿ ಅನೇಕ ಜನ ಕುಷ್ಠರೋಗಿಗಳಿದ್ದಾರೆ, ತೊನ್ನುರೋಗದಿಂದ ನರಳು ವವರಿದ್ದಾರೆ ಅಂತಹವರನ್ನು ಈ ಬೆಗ್ಗರ್ ರಿಲೀಫ್ ಸೆಂಟರ್ ಂದ ಕೂಡಲೇ ತೆಗೆದುಹಾಕಬೇಕು. ಅದಕ್ಕಾಗಿ ಒಂದು ಕುಷ್ಠರೋಗದ ಒಂದು ಸೆಂಟರನ್ನು ಕೂಡಲೇ ತೆಗೆಯಬೇಕು. ಕುಷ್ಠರೋಗ ಇರು ವವರು, ತೊನ್ನು ಇರುವವರು, ಅಂಟುಜಾಡ್ಯ ರುವವರು—ಇಂತಹವರನ್ನು ತಿರುಪೆಯಿಂದ ತೆಗೆದು ಹಾಕಿ ಅಂತಹವರು ಬೇರೆ ಕಡೆಗೆಳಿಗೆ ಸಾಗಿಸಬೆ ಕು ಮತ್ತು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕು. ಇದರ ಜೊತೆಗೆ ಈ ದೇವಸ್ಥಾನಗಳ ಹತ್ತಿರ ಎರಡು ವರ್ಗದವರು ತಿರುಪೆಗಾರರಿರುತ್ತಾರೆ. ಒಂದನೆಯದು ಕೈಯೊಡ್ಡಿ ಬೇಡುವುದು, ಇನ್ನೊಂದು ತಿರುಪೆಗಾರರಾಗಿರುವವರು ಜನಗಳನ್ನು ಮೋಸ ಗೊಳಿಸುವ ಕ್ರಮ ಅದೇನೆಂದರೆ ಸುಮ್ಮಸುಮ್ಮನೆ ದೇವರನ್ನು ತೋರಿಸುತ್ತೇನೆಂದು ಜನಗಳಿಗೆ ಹೇಳು ವುದು, ಪೂಜೆ ಮಾಡಿಸುತ್ತೇನೆ, ಆಗ ಕೂಡಲೇ ಎಲ್ಲ ಪಾಪಗಳು ಹೋಗಿಬಿಡುತ್ತವೆಂದು ಹೇಳುವುದು—ಈ ರೀತಿಯಾಗಿ ಹೇಳಿಕೊಂಡು ಭಿಕ್ಷಾವೃತ್ತಿ ಮಾಡುವುದಾದೆ. ಅದೂ ಅಲ್ಲದೆಯೇ ಈ ರೀತಿ ಪೂಜೆ ಮಾಡು ವುದರಿಂದ ಎಲ್ಲಾ ಪಾಪಗಳು ಹೋಗುತ್ತವೆಂದು ಹೇಳುವುದು. ಇಂತಹ ಒಂದು ಹೊಸ ತರಹ ತಿರುಪೆ ಜನರೂ ಸಹ ಇರುತ್ತಾರೆ. ಆದರಿಂದ ಬಹು ಮುಖ್ಯವಾಗಿ ನಮ್ಮ ದೇಶದಿಂದ ಈ ತಿರುಪೆಗಾರರ ಕಾಟ

ವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡಬೇಕು. ಈಗ ಈ ಬೆಗ್ಗರ್ ರಿಲೀಫ್ ಕಮಿಟಿ ಬಂದಕೂಡಲೇ ಇದುವರೆಗೆ ಸುಮಾರು ಮೂರು ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಆದರೆ ಈ ಬೆಗ್ಗರ್ಸ್‌ನಿಂದ ಆಗಿರತಕ್ಕ ತೊಂದರೆ, ನ್ಯೂಸೆನ್ಸ್ ಇನ್ನೂ ತಪ್ಪಿಲ್ಲವೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ ಇದಾದ್ದನ್ನು ಯಾವ ರೀತಿಯಲ್ಲಿ ತಪ್ಪಿಸುವುದಕ್ಕೆ ಸಾಧ್ಯ ವಾಗುತ್ತದೆನ್ನುವುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ತಿಳಿಸಬೇಕೆಂದು ನಾನು ಒತ್ತಾಯಪಡಿಸುತ್ತೇನೆ ನಾನು ಮೊದಲೇ ಭಿಕ್ಷುಕರಿಗೆ ಕೊಡತಕ್ಕ ಶಿಕ್ಷೆಯ ಬಗ್ಗೆ ಹೇಳಿದ್ದೇನೆ. ಇದಲ್ಲದೆ ಈಗ ಇನ್ನೊಂದು ಸಮಸ್ಯೆ ಉಂಟಾಗಿದೆ. ತಿರುಪೆ ಮಾಡುವವರು ಮಾರಾಟದ ವಸ್ತುಗಳಂತೆ ಆಗಿದ್ದಾರೆ. ಅವರನ್ನು ಕೊಂಡು ಇಟ್ಟುಕೊಂಡು ಜೀವನ ಮಾಡತಕ್ಕವರೂ ಸಹ ಈಗ ನಮ್ಮ ರಾಜ್ಯದಲ್ಲಿ ಅನೇಕರು ಇದ್ದಾರೆ ಇದು ವಾಸ್ತವಾಂಶದ ವಿಷಯ ಕೈಕಾಲು ಇಲ್ಲದೆ ಇರತಕ್ಕವರನ್ನು ೨೦೦-೩೦೦ ರೂಪಾಯಿ ಗಳಿಗೆ ಕೊಂಡುಕೊಂಡು ಅವರ ಮುಖಾಂತರ ಜೀವನವನ್ನು ಮಾಡತಕ್ಕವರೂ ಸಹ ಅನೇಕರು ನಮ್ಮ ರಾಜ್ಯದಲ್ಲಿದ್ದಾರೆ. ಆದ್ದರಿಂದ ಆಂಗವಿಕಲರನ್ನು ಕೊಂಡುಕೊಂಡು ಜೀವನ ಮಾಡುವವರನ್ನು ಅಬೆಟ್ಟರ್ಸ್ ಲಿಸ್ಟ್‌ನಲ್ಲಿ ಸೇರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ಅದಕ್ಕೆ ಬೇಕಾದಂಥ ಸಬ್‌ಸ್ಟಿಪಷನ್ಸ್. ಡೊನೇಷನ್ಸ್‌ಗಳನ್ನು ಕಲೆಕ್ಟ್ ಮಾಡಬೇಕಾಗಿದೆ. ಅದೂ ಅಲ್ಲದೆ ಸರ್ಕಾರದಿಂದ ಗ್ಯಾರಂಟಿಯನ್ನು ಸಹ ಪಡೆಯಬೇಕಾಗಿದೆ. ಇದರ ಜೊತೆಗೆ ಏನಾದರೂ ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಗ್ಯಾರಂಟಿ ಬರುವುದಾದರೂ ಅದನ್ನೂ ಸಹ ನಮ್ಮ ಸರ್ಕಾರದವರು ವಸೂಲು ಮಾಡುವು ದಕ್ಕೆ ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಅದೂ ಅಲ್ಲದೆ ಲೋಕಲ್ ಬಾಡಿಗಳಿಂದಲೂ ಮತ್ತು ಪಬ್ಲಿಕ್ ಇನ್‌ಸ್ಟಿಟ್ಯೂಷನ್‌ಗಳಿಂದಲೂ ಇದರ ಬಗ್ಗೆ ಗ್ಯಾರಂಟಿ ಪಡೆಯಬಹುದು. ನನ್ನ ಅಭಿಪ್ರಾಯದಲ್ಲಿ ಲೋಕಲ್ ಬಾಡಿಯವರಿಗೆ ಸ್ವಲ್ಪ ಇದರ ಬಗ್ಗೆ ಜವಾಬ್ದಾರಿ ಹಾಕುವುದು ಅವಶ್ಯಕವೆಂದು ನಾನು ತಿಳಿದಿದ್ದೇನೆ. ಏಕೆಂದರೆ ಮೊದಲು ಅವರಿಗೆ ಲೋಕಲ್ ಬಾಡಿಯ ವರು ಷೆಲ್ಟರ್ ಕಟ್ಟಿಕೊಡುತ್ತಿದ್ದರು ಅದಕ್ಕಾಗಿ ಬೆಂಗಳೂರು ನಗರದ ಕಾರ್ಪೊರೇಷನ್ನಿನವರು ಹಿಂದೆ ಬೆಗ್ಗರ್ಸ್ ರಿಲೀಫ್ ಕಮಿಟಿಗೆ ೧೦ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು. ಯಾವುದೋ ಕಾರಣ ದಿಂದ ಅದನ್ನು ಈಗ ನಿಲ್ಲಿಸಿದ್ದಾರೆ. ಈಗ ಅದು ಬರುತ್ತಾ ಇಲ್ಲ. ಈಗಾಗಲೇ ಯಾವ್ಯಾವುದೋ ಕೆಲಸ ಕಾರ್ಯಗಳಿಗೆ ಹತ್ತಾರು ಸಾವಿರ ರೂಪಾಯಿಗಳನ್ನು ಅನೇಕ ಬಾಬುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಅವರು ಕೊಡುತ್ತಿದ್ದಾರೆ ಆದ್ದರಿಂದ ಇಂತಹ ಒಳ್ಳೆಯ ಕೆಲಸಗಳಿಗೆ ಇದಷ್ಟು ಕೂಡ ಹಣವನ್ನು ಲೋಕಲ್ ಬಾಡೀಸ್‌ಗಳಿಂದ ಕೊಡಿಸುವುದಕ್ಕೆ ಏರ್ಪಾಡು ಮಾಡಬೇಕು. ಇನ್ನೊಂದು ವಿಷಯ. ನಾನು ಅನೇಕ ಸಾರಿ ಕೆಲವು ಸಂದರ್ಭಗಳಲ್ಲಿ ಬೆಗರ್ಸ್ ರಿಲೀಫ್ ಕಮಿಟಿ ಮೀಟಿಂಗಿಗೆ ಹೋಗಿದ್ದೇನೆ. ಅಲ್ಲಿ ಬೇಕಾದಷ್ಟು ತಿಗಣೆಗಳವೆ. ಅಸಾಧ್ಯವಾದ ತಿಗಣೆಗಳು. ಕೈಯಲ್ಲಿ ಬಾಚಿಕೊಳ್ಳುವ ಹಾಗೆ ಇದೆ. ಆದ್ದರಿಂದಲೇ ಅನೇಕ ಭಿಕ್ಷೆ ಕರು ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಮಾಡುತ್ತಾರೆ. ಆದ್ದರಿಂದ ಅಲ್ಲಿರ ತಕ್ಕವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಲು ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಅವರೆ ಬೆಗ್ಗರ್ಸ್ ರಿಲೀಫ್ ಕಮಿಟಿ ಮೀಟಿಂಗ್ ಇರುವಾಗ ಮಾತ್ರ ಅಲ್ಲಿ ಬಹಳ ಸ್ವಚ್ಛವಾಗಿ ಇಟ್ಟಿರುತ್ತಾರೆ. ಅಲ್ಲಿ ತಿರುಪೆ ಯಿಂದ ಒಂದಂಥ ಸಾಮಾನುಗಳನ್ನು ಮತ್ತು ದುಡ್ಡನ್ನು ಎಷ್ಟೋ ಲೂಟಿ ಮಾಡುತ್ತಿರುವುದೂ ಉಂಟು. ಅಂತಹವರು ಕೆಲವರು ಅಲ್ಲಿ ಸೇರಿಕೊಂಡಿದ್ದಾರೆ. ಅಲ್ಲಿನ ಸೆಟ್ಲ್‌ಮೆಂಟಿನಲ್ಲಿ ಮೊದಲು ಮೊದಲು ಭಿಕ್ಷೆ ಮಾಡಿ ತಂದಂಥ ಪದಾರ್ಥಗಳನ್ನು ಇಟ್ಟಬಂದ ಹಾಗೆ ಲೂಟಿ ಮಾಡುತ್ತಿದ್ದರು. ಅಂಥವನ್ನೆಲ್ಲ ಈಗ ಸ್ವಲ್ಪ ಮಟ್ಟಿಗೆ ಒಂದು ಕ್ರಮಕ್ಕೆ ತಂದಿದ್ದಾರೆ. ಆದರೂ ಕೂಡ ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಆಸಕ್ತಿ ಯನ್ನು ವಹಿಸಿ ಅಲ್ಲಿ ತಕ್ಕವರಿಗೆ ಹೆಚ್ಚಿಗೆ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು ಹಿಂದೆ ಒಂದು ಸಾರಿ ಅಲ್ಲಿರತಕ್ಕವರಲ್ಲಿ ಒಬ್ಬ ೧೦ ರೂಪಾಯಿಗಳನ್ನು ಕದ್ದುಕೊಂಡು ಹೋಗಿ ಅವನ್ನು ಕೊಡಲಿಲ್ಲ ಆಗ ಅಲ್ಲಿ ನೋಡಿಕೊಳ್ಳುತ್ತಿದ್ದ ಒಬ್ಬ ವಾರ್ಡನನ್ನು ಸಸ್ಪೆಂಡ್ ಮಾಡಬೇಕಾಯ್ತು. ಅಲ್ಲಿಗೆ ತಿರುಪೆ ಮಾಡಿ ತೆಗೆದು ಕೊಂಡು ಹೋದಂಥ ಸಾಮಾನುಗಳನ್ನು ಅಲ್ಲಿಗೆ ಹಾಕಿದಮೇಲೆ ಅವು ಅವರಿಗೆ ಹೆಚ್ಚಿಗೆ ಉಪಯೋಗವಾಗ ಬೇಕಾಗುತ್ತದೆ ಏಕೆಂದರೆ, ಅವರ ಬೀಡಿ ಸೇದುವುದು, ಕಡಿಯುವುದು—ಇತಂಥ ದುಶ್ಚಟಗಳನ್ನು ಇಟ್ಟುಕೊಂಡಿರುತ್ತಾರೆ. ಇಲ್ಲಿರತಕ್ಕಂತಹ ಅನೇಕ ಇನ್‌ವೇಟ್ಸ್ ತಪ್ಪಿಸಿಕೊಂಡು ಹೋಗುವುದಕ್ಕೂ ಅಲ್ಲಿರ ತಕ್ಕಂತಹ ಅನೇಕ ವಾರ್ಡನ್ಸ್ ಸಹ ಸಹಾಯಕರಾಗಿರುತ್ತಾರೆ. ಇದರ ಬಗ್ಗೆ ಸಹ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಆ ಮೇಲೆ ಅಲ್ಲಿರತಕ್ಕಂತಹ ನಿರಾಶ್ರಿತರ ಕೇಂದ್ರದಲ್ಲಿ ಸುಮಾರು ೫೦-೬೦ ಸಾವಿರ ರೂಪಾಯಿಯಷ್ಟು ಉತ್ಪತ್ತಿ ಇದೆ. ಅಲ್ಲಿ ಬೆಗ್ಗರ್ ರಿಲೀಫ್ ಫಂಡಿನಿಂದ ಬರತಕ್ಕಂತಹ ವರ್ಷವೂ, ಡೊನೇಶನ್ ಸಬ್‌ಸ್ಕ್ರಿಪ್ಷನ್ಸ್, ಸರ್ಕಾರೀ ಗ್ಯಾರಂಟಿ ಲೋಕಲ್ ಬಾಡೀಗಳಿಂದ ಬರತಕ್ಕ ಆದಾಯ ಮತ್ತಿತರ ಆದಾಯಗಳು ಇರುತ್ತವೆ. ಆದ್ದರಿಂದ ಅಲ್ಲಿ ಬರತಕ್ಕಂತಹ ಇನ್‌ಕಂನ್ನು ಸಹ ಇದರಲ್ಲಿ ಸೇರಿಸಬೇ ಕೆಂದು ಹೇಳುತ್ತೇನೆ.

(ಶ್ರೀ ಟಿ. ಆರ್. ಶಾಮಣ್ಣ)

ಇನ್ನು ಅಲ್ಲಿ ಬಾದುತಹ ಇನ್‌ಮೇಟ್ಸ್‌ಗೆ ಒಂದು ಸುಪಾವನೆ ಮಾಡತಕ್ಕ ಶಕ್ತಿ ಮತ್ತು ಆಶಕ್ತಿ ಉಂಟುಮಾಡವ ಹಾಗೆ ಮಾಡಬೇಕು ಅವರಲ್ಲಿ ಇರತಕ್ಕಂತಹ ಸೋವಲಿಕತನವನ್ನು ಹೋಗಲಾತಿಸುವುದಕ್ಕೆ ಪ್ರಯತ್ನ ಮಾತಬೇಕು. ಆದ್ದರಿಂದ ಏನನು ತಿರುಪೆ ಮಾತಡಿ ಸೇವನ ಮಾಡುವ ಹಾಗೆ ಮಾಡದಿದ್ದರೆ ಇಂಥ ಮಸೂದೆಯನ್ನು ತಂದರೂ ಏನೂ ಪ್ರಯೋಜನವಾಗುವುದಿಲ್ಲ.

2-30. P.M.

ಇದರಲ್ಲಿ ಬೆಗ್ಗರಿಸೆಸ್ ಸಹ ಹಾಕಬಹುದು ಎಂಬುದನ್ನು ಹೇಳಿದ್ದೀರಿ. ಅದರೆ ಊರಿನಲ್ಲಿ ಮನೆ ಅಥವಾ ಹೊಲ ಇರುವವರು ಇಂಥ ಬೆಗ್ಗರ್ಸ್‌ನ್ನು ಸಾಕುವುದಕ್ಕೆ ಸೆಸ್ ಕೊಡಬೇಕೆಂದು ಆಯಿತು. ಆಮೇಲೆ ಸಾಮಾನುಗಳ ಮೇಲೆ ಆಕ್ಟ್ರಾಯಿ ಕೊಡವಾಗ, ವಾಹನಗಳ ಮೇಲೆ ಟ್ಯಾಕ್ಸ್ ಕೊಡವಾಗ —ಈ ಸೆಸ್‌ನ್ನು ಸೇರಿಸಬಹುದೆಂದು ಹೇಳುತ್ತಿದ್ದೀರಿ. ಇದರಿಂದ ಏನಾಗುತ್ತದೆ ಅಂದರೆ ಪ್ರತಿಯೊಬ್ಬ ಸುಪಾವನೆ ಮಾಡತಕ್ಕವನು ಕೂಡ ಸೋಮಾರಿಯಾಗಿ ಕೆಲಸ ಮಾಡತಕ್ಕ ಜನರಿಂದ ಅವರಿಗೆ ಸಹಾಯ ಕೇಳುವುದು ಸರಿಯಲ್ಲ. ಏಕೆಂದರೆ, ಈಗ ಗಲೀ ಅನೇಕ ಸೆಸ್‌ಗಳು ನಮ್ಮ ರಾಜ್ಯದಲ್ಲಿ ಜಾರಿಯಲ್ಲಿವೆ. ಅವರ ಜೊತೆಗೆ ಈ ಬೆಗ್ಗರಿ ಸೆಸ್‌ನ್ನು ಸಹ ಸೇರಿಸುತ್ತಾ ಹೋದರೆ ಜನರಿಗೆ ಹೆಚ್ಚಿನ ಹೊರೆಯಾಗುತ್ತದೆಯೇ ವಿನಃ ತಿರುಪೆ ಮಾಡತಕ್ಕವರ ಸಂಖ್ಯೆ ಕಡಿಮೆಯಾಗುವುದಿಲ್ಲ. ಆದ್ದರಿಂದ ಈ ಸೆಸ್ ಕೊಡತಕ್ಕ ಅಂಶವನ್ನು ಕಿತ್ತುಹಾಕಬೇಕೆಂದು ನನ್ನ ಖಚಿತವಾದ ಅಭಿಪ್ರಾಯ. ಇನ್ನೊಂದು ವಿಷಯ ಏನೆಂದರೆ, ಈಗ ಹೆಚ್ಚಾಗಿ ತಿರುಪೆ ಎತ್ತುವುದಕ್ಕೆ ಬರುವವರು ಹೊರ ರಾಜ್ಯಗಳಿಂದ ಬಾದಂಥವರು. ಹೊರಗಿನಿಂದ ಶೇಕಡಾ ೨೦ ರಷ್ಟು ಜನರು ನಮ್ಮ ಬೆಂಗಳೂರಿಗೆ ಬರುತ್ತಾರೆ. ನಮ್ಮ ರಾಜ್ಯದವರು ಕೇವಲ ಒಂದು ೨೦ ಪರ್ಸೆಂಟ್ ಇರಬಹುದು ಅಷ್ಟೆ. ನಮ್ಮಲ್ಲಿ ಎಷ್ಟೋ ಜನರು ಸ್ವಾಭಿಮಾನದಿಂದ ತಿರುಪೆ ಎತ್ತುವುದಕ್ಕೆ ಹೋಗುವುದಿಲ್ಲ. ಹಿಂದೆ ಒಂದು ಸಾರಿ ತಮಿಳ್ನಾಡು ಅಥವಾ ತೆಲುಗಿನವರನ್ನು ಅಲ್ಲಿಗೆ ಕಳಿಸಬಹುದೇ ಎಂದು ಯೋಚನೆ ಮಾಡಿದಾಗ ಅದು ರಾಜ್ಯಾಂಗದ ಪ್ರಕಾರ ಸರಿಯಾಗುವುದಿಲ್ಲವೆಂದು ಆಯಿತು. ಆದರೆ ನಾನಾದರೂ ಹೇಳುವುದೇನೆಂದರೆ, ಬೇರೆ ರಾಜ್ಯದಿಂದ ಬಾದು ತಪ್ಪು ಮಾಡಿದರೆ, ಅವರನ್ನು ಪುನಃ ಅಲ್ಲಿಗೆ ವಾಪಸ್ಸು ಕಳಿಸಲು ಅವಕಾಶವಿದೆ. ಅದೇ ರೀತಿ ಇವರನ್ನು ಸಹ ಕಳಿಸಲು ಹಿಕೆ ಆಗುವುದಿಲ್ಲವೆಂಬುದನ್ನು ಯೋಚನೆ ಮಾಡಬೇಕು.

ಇನ್ನು ಬೆಗ್ಗರ್ಸ್ ಸಮಸ್ಯೆಯನ್ನು ತಪ್ಪಿಸಬೇಕಾದರೆ ಇದರಲ್ಲಿ ಮೂರು ತರಹ ಇದೆ. ಒಂದನೆಯದು ಅನೇಕ ಅಂಗ ವಿಕಲರು ಮತ್ತು ಕಣ್ಣು ಕಾಣದಂತವರು ಇದ್ದರೆ, ಅವರನ್ನು ಸಾಕಬೇಕಾದಂತಹ ಜವಾಬ್ದಾರಿ ಸಮಾಜಕ್ಕೆ ಇದೆ. ಆದರೂ ಕೂಡ ಕೆಲವರಿಗೆ ಒಂದು ಕೆಲಸ ಮಾಡಲು ಆಗದಿದ್ದರೆ ಇನ್ನೊಂದು ಕೆಲಸ ಮಾಡುವಂತೆ ತರಬೇತಿಯನ್ನು ಕೊಡಬಹುದು. ಆದ್ದರಿಂದ ಅಂಥವರ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು ಆದರೆ ಬಿಲ್ಲಿನಲ್ಲಿ ಬೆಗ್ಗರಿಯನ್ನು ತಪ್ಪಿಸುವುದಕ್ಕೆ ಯಾವ ಒಂದು ವಿಚಾರವನ್ನು ಸಹ ಪ್ರಸ್ತಾಪ ಮಾಡದೆ ಇರುವುದು ಶೋಚನೀಯ ಉದಾಹರಣೆಗೆ ಒಬ್ಬನನ್ನು ಅರೆಸ್ಟ್ ಮಾಡಿ, ಆರು ತಿಂಗಳ ಮೇಲೆ ರಿಲೀಸ್ ಮಾಡುತ್ತಾರೆ ಆದರೆ ಹಾಗೆ ರಿಲೀಸ್ ಮಾಡಿದ ಮೇಲೆ ಅವನನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ನಾವು ಮಾಡಬೇಕು. ಯಾವ ರೀತಿಯಲ್ಲಿ ಅವನನ್ನು ಸಮಾಜದಲ್ಲಿ ಉಪಯುಕ್ತವಾಗುವಂತಹ ವ್ಯಕ್ತಿಯಾಗುವ ಹಾಗೆ ಮಾಡಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ಅವನ್ನು ಇದರಲ್ಲಿ ನಮೂದು ಮಾಡಿಲ್ಲ. ಒಂದು ಸಾರಿ ಅರೆಸ್ಟ್ ಮಾಡಿದವನು ಬಿಟ್ಟನೆಲೆ ಪುನಃ ಅದೇ ರೀತಿ ಅಪರಾಧ ಮಾಡಿದರೆ ಅವರಿಗೆ ಹೆಚ್ಚು ಶಿಕ್ಷೆಯನ್ನು ವಿಧಿಸಬೇಕು. ಬೆಂಗಳೂರಿನಲ್ಲಿ ಎಲ್ಲಿಯಾದರೂ ಒಂದು ಕಡೆ ತಿರುಪೆ ಎತ್ತುವವರನ್ನು ಹಿಡಿಯುವುದಕ್ಕೆ, ಬರುತ್ತಾರೆಂದು ಗೊತ್ತಾದರೆ, ಆ ದಿವಸ ಅಲ್ಲಿ ಯಾರೂ ಇರುವುದಿಲ್ಲ. ಅವರಿಗೆ ಮೊದಲೇ ಗೊತ್ತಾಗುತ್ತದೆ ಹಾಗೆ ಒಂದು ವೇಳೆ ಬಾದರೂ, ಬರತಕ್ಕಂತಹ ಪೋಲೀಸರಿಗೆ ಏನಾದರೂ ಕೊಟ್ಟು ಬಿಟ್ಟರೆ ಅವನನ್ನು ಬಿಟ್ಟುಬಿಡುತ್ತಾರೆ. ಶುಕ್ರವಾರ ದಿನ ತಿರುಪೆಗೆ ಬರುವವರನ್ನು ಸಾಲು ಸಾಲಾಗಿ ಎಲ್ಲಾ ಬೀದಿಗಳಲ್ಲಿಯೂ ನೋಡಬಹುದು. ಆದ್ದರಿಂದ ಬೆಗ್ಗರಿಯನ್ನು ತಪ್ಪಿಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆದರಿಂದ ಇದರಲ್ಲಿ ಸ್ವಲ್ಪ ಕಂಡಿಷನ್ಸ್ ಇಂಪೋಸ್ ಮಾಡಿದರೆ ವಿನಹ ಕನಿಕರದಿಂದ ಅಲ್ಲ. ಇಲ್ಲವಿದ್ದರೆ ನಾವು ಸೋಮಾರಿಗಳನ್ನು ಬೆಳೆಸುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಕೊನೆಯದಾಗಿ ನಾವು ಇಂತಹ ಮಸೂದೆಯನ್ನು ತಂದರೂ ಇದರಿಂದ ಎಷ್ಟು ಖರ್ಚಾಯಿತು ಮತ್ತು ಎಷ್ಟು ಪ್ರಯೋಜನವಾಯಿತು ಎಂಬುದರ ಸ್ಟಾಟಿಸ್ಟಿಕ್ಸ್ ಇಟ್ಟುಕೊಂಡಿ

ಇದರಿಂದ ಪ್ರಯೋಜನವಾಯಿತೇ ಇಲ್ಲವೇ ಎಂಬುದನ್ನು ಕಂಡುಹಿಡಿಯಬೇಕು. ಬೆಗ್ಗರಿ ತಪ್ಪಬೇಕೆಂಬುದರಲ್ಲಿ ನನ್ನ ವಿರೋಧವಿಲ್ಲ. ಆದರೆ ನಾವು ಇದರ ಬಗ್ಗೆ ದುಡ್ಡನ್ನು ಖರ್ಚು ಮಾಡುವಾಗ ಅದು ಶಾಶ್ವತವಾಗಿ ಪರಿಣಾಮವಾಗುವ ಹಾಗೆ ಖರ್ಚು ಮಾಡಬೇಕಲ್ಲದೆ ಬೇರೆ ರೀತಿಯಲ್ಲಿ ಅಲ್ಲವೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಮಾನ್ಯ ಅಧ್ಯಕ್ಷರೇ ಸರ್ಕಾರದವರು ಈ ಭಿಕ್ಷಾಟನೆಯನ್ನು ನಿರೋಧಿಸತಕ್ಕ ವಿಧೇಯಕವನ್ನೇನು ಈ ಸಭೆಯಮುಂದೆ ಮಂಡನೆ ಮಾಡಿದ್ದಾರೆ. ಈ ವಿಧೇಯಕವನ್ನು ನೋಡಿ ನನಗೆ ಸ್ವಲ್ಪ ನಗು ಬಂತು. ಕಾರಣವೇನೆಂದರೆ ಇವರು ಹೊಸದಾಗಿ ಭಿಕ್ಷಾಟನೆಯನ್ನು ನಿರೋಧಿಸತಕ್ಕ ಯೋಜನೆಯನ್ನು ಕೈಗೆತ್ತಿಕೊಳ್ಳತಕ್ಕದ್ದು ಒಂದು ಹೊಸ ಪರಿಸ್ಥಿತಿ ಎಂದು ನಮ್ಮಲ್ಲೂ ಕೂಡ ಒಂದು ಕಾಯಿದೆ ಇದೆಯೆಂದು ಹೇಳಿಕೊಳ್ಳುವುದಕ್ಕೆ ಪ್ರಯತ್ನ ನಡೆದಿದೆಯೇ ಹೊರತು ನಿಜವಾಗಿ ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇದಕ್ಕೆ ಕಾರಣ ಇಷ್ಟೆ. ಈ ದೇಶ ಒಂದು ತಿರುಕರ ದೇಶ, ಭಿಕ್ಷುಕರ ದೇಶ. ನಮ್ಮ ದೇಶದಲ್ಲಿ ದೊಡ್ಡವರು ಭವತಿ ಭಿಕ್ಷಾಂದೇಹಿ ಎಂದು ಸಾವಿರಾರು ವರ್ಷಗಳಿಂದ ಶತ ಶತಮಾನಗಳಿಂದ ಸಾವಿರ ವರ್ಷಗಳಿಂದ ಸಂಸ್ಕೃತಿಯು ಒಂದು ಅಭ್ಯಾಸ ಎನ್ನುವ ರೀತಿಯಲ್ಲಿ ಅದನ್ನು ಅನುಸರಿಸಿಕೊಂಡು ಬಂದಿದ್ದಾರೆ. ಭಿಕ್ಷಾಟನೆಯು ಕೇಂದ್ರಗಳು ನಮ್ಮ ರಾಜ್ಯದಲ್ಲಿರತಕ್ಕ ಮತ್ತು ನಮ್ಮ ರಾಷ್ಟ್ರದಲ್ಲಿರತಕ್ಕ ದೇವಾಲಯಗಳು. ಹೀಗೆ ನಮ್ಮ ಸಂಸ್ಕೃತಿಯು ಹಾಸುಹೊಕ್ಕಾಗಿ ಬಂದಿರತಕ್ಕ ಭಿಕ್ಷಾಟನೆ ಏನಿದೆ ಅದನ್ನು ನಿರೋಧಿಸುವುದಕ್ಕೆ ಸರ್ಕಾರದವರು ಯಾವ ರೀತಿಯ ಕ್ರಮವನ್ನು ಕೈಗೊಳ್ಳಬೇಕು ಎಂಬುದು ಅವರಿಗೆ ಗೊತ್ತಾಗುವುದಿಲ್ಲ. ನಮ್ಮ ಸಂಸ್ಕೃತಿಯ ಪರಂಪರೆಯಲ್ಲಿ ಭಿಕ್ಷೆಯನ್ನು ಬೇಡತಕ್ಕದ್ದು ಹಾಸುಹೊಕ್ಕಾಗಿ ಬಂದಿದೆ. ಬೀದಿಗಳಲ್ಲಿ ಕೈಯೊಡ್ಡಿ ಭಿಕ್ಷೆಯನ್ನು ಕೇಳುವವರು ಭಿಕ್ಷುಕರು ಮಾತ್ರವೇ ಅಲ್ಲ. ಬಿಳಿ ಅಂಗಿಯನ್ನು ಹಾಕಿಕೊಂಡಿರತಕ್ಕವರೂ ಗೌರವಯುತವಾಗಿ ಕೈಯೊಡ್ಡಿ ಭಿಕ್ಷೆಯನ್ನು ಬೇಡುತ್ತಾರೆ. ಇವರು ಈ ದೇಶವನ್ನು ಈ ಒಂದು ಪರಿಸ್ಥಿತಿಗೆ ತಂದಿದ್ದಾರೆ. ಈ ಭಿಕ್ಷಾಟನೆಯನ್ನು ನಿರ್ಮೂಲ ಮಾಡಬೇಕಾದರೆ ಈ ಪರಿಸ್ಥಿತಿಯ ಮೂಲ ಪರಿವರ್ತನೆ ಮೂಲಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಅಲ್ಲಲ್ಲಿ ಸೂಜಿಯ ಮೊನೆಯಷ್ಟು ಸಣ್ಣ ಸಣ್ಣ ಗುರುತನ್ನು ಅಳಿಸುವ ಪ್ರಯತ್ನವನ್ನು ಮಾಡಿದರೆ ಅದು ಕೇವಲ ವಿಫಲ ಯತ್ನವಾಗುತ್ತದೆ. ಇದು ಸಮಗ್ರವಾದ ಬದಲಾವಣೆಗೆ ಯಾವ ರೀತಿಯಲ್ಲೂ ಪೂರಕವಾಗುವುದಿಲ್ಲ. ಈಗ ಕಳೆದ ೨೫ ವರ್ಷಗಳಿಂದ ಅಧಿಕಾರದ ಗದ್ದುಗೆಗೆ ಬಂದ ಕಾಂಗ್ರೆಸ್ ಸರ್ಕಾರಗಳು (ಕಾಂಗ್ರೆಸ್ ಓ ಆಗಲೀ ಕಾಂಗ್ರೆಸ್ ಆರ್. ಆಗಲೀ) ಸಂವಿಧಾನದಲ್ಲಿ ಹೇಳಿರತಕ್ಕ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಏನಿವೆ ಅವುಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತಂದಿದ್ದರೆ ಈ ಒಂದು ವಿಧೇಯಕವನ್ನು ಸರ್ಕಾರದವರು ಮಂಡಿಸತಕ್ಕ ಅಗತ್ಯ ಬೀಳುತ್ತಾ ಇರಲಿಲ್ಲ. ಇವರು ಸಂವಿಧಾನಕ್ಕೆ ವಿರೋಧವಾಗಿ ಇದರ ಬಗ್ಗೆ ಅಪ್ರಮಾಣಿಕವಾಗಿ ನಡೆಮಕೊಂಡಿದ ಕಾರಣದಿಂದ ಈ ವಿಧೇಯಕವನ್ನು ಮಂಡಿಸತಕ್ಕ ಪರಿಸ್ಥಿತಿಗೆ ಈ ಸರ್ಕಾರಗಳು ಬಂದಿವೆ. ಕಳೆದ ೨೫ ವರ್ಷಗಳಿಂದ ಈ ಒಂದು ಭಿಕ್ಷಾಟನೆಯ ವಾತಾವರಣವನ್ನು ಕಲ್ಪನೆ ಮಾಡಿರತಕ್ಕವರು ಕಾಂಗ್ರೆಸ್ ಸರ್ಕಾರಗಳು ಎಂದು ಹೇಳಬಹುದು. ರಾಜ್ಯದಲ್ಲಿ ಭಿಕ್ಷಕರಲ್ಲದೇ ಇರುವವರು ಯಾರೂ ಇಲ್ಲ. ಒಂದಲ್ಲ ಒಂದು ರೀತಿಯಲ್ಲಿ ಎಲ್ಲರೂ ಭಿಕ್ಷುಕರೇ ಆಗಿದ್ದಾರೆ. ರಾಷ್ಟ್ರ ಸರ್ಕಾರ ಕೂಡ ಪರದೇಶವಂದ ಆಹಾರ ಧಾನ್ಯವನ್ನು ಆರ್ಥಿಕ ಸಹಾಯವನ್ನು ಬೇಡುತ್ತದೆ. ನಾವು ಇಂಥಾ ಒಂದು ಸ್ಥಿತಿಗೆ ಬಂದಿದ್ದೇವೆ. ಪ್ರತಿಯೊಂದು ವಿಷಯದಲ್ಲಿ ಕೂಡ ಭಿಕ್ಷೆಯನ್ನು ಬೇಡತಕ್ಕ ಪರಿಸ್ಥಿತಿಗೆ ಬಂದು ಇಳಿದಿದ್ದೇವೆ. ಈ ಪರಿಸ್ಥಿತಿ ಬದಲಾವಣೆಯಾಗಬೇಕಾದರೆ ಮೂಲಭೂತವಾಗಿ ಜನರಿಗೆ ಆರ್ಥಿಕ ಬಲವನ್ನು ತಂದು ಕೊಡುವುದಕೆ ಪ್ರಯತ್ನ ಮಾಡಬೆಕೇ ಹೊರತು ಇಂಥಾ ಒಂದು ವಿಧೇಯಕವನ್ನು ಈ ಸಭೆಯಲ್ಲಿ ತಂದು ಜನಗಳ ಕಣ್ಣೊರೆಸುವುದಕ್ಕೆ ಪ್ರಯತ್ನ ಮಾಡಿದರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ನಮ್ಮ ದೇಶದಲ್ಲಿ ೧೦೦ಕ್ಕೆ ೮೫ ಜನ ಬಡವರು ಇದ್ದಾರೆ. ಒಂದು ದೃಷ್ಟಿಯಿಂದ ಎಲ್ಲರೂ ಭಿಕ್ಷುಕರೇ ಆಗಿದ್ದಾರೆ. ಸಾಮಾನ್ಯ ರೈತರು, ಗೇಣಿದಾರರು, ಬೇಸಾಯ ಕೂಲಿಗಾರರು ಏನಿದ್ದಾರೆ ಅವರ ನಿಜವಾದ ಪರಿಸ್ಥಿತಿ ಭಿಕ್ಷುಕರ ಪರಿಸ್ಥಿತಿಗಿಂತ ಏನೂ ವ್ಯತ್ಯಾಸವಿಲ್ಲ ಅವರು ನೋಡುವವರ ಕಣ್ಣಿಗೆ ಭಿಕ್ಷುಕರಲ್ಲ. ಆದರೆ ಅವರು ಪ್ರತಿಯೊಂದಕ್ಕೂ ಅಂಗಲಾಚಿ ಬೇಡುವ ಪರಿಸ್ಥಿತಿಯನ್ನು ನೋಡಿದರೆ ಅವರನ್ನು ಯಾರು ಭಿಕ್ಷಕರಲ್ಲ ಎಂದು ಹೇಳುತ್ತಾರೆ? ಮಧ್ಯಮವರ್ಗದ ಜನ ರಾಷ್ಟ್ರದಲ್ಲಿ ಬಡವರು ಎಂದು ಹೇಳಿಕೊಳ್ಳುವುದಕ್ಕೆ ನಾಚಿಕೆ ಪಡತಕ್ಕ ಒಂದು ರೀತಿಯ ದೊಡ್ಡಸ್ತಿಕೆಯನ್ನು ಹೊಂದಿದ್ದಾರೆ. ಆ ರೀತಿ ದೊಡ್ಡಸ್ತಿಕೆಯನ್ನು ತೋರಿಸತಕ್ಕ ಮಧ್ಯಮ ವರ್ಗದ ಜನ ಬಡವರೇ ಹೊರತು, ಆದರೆ ಅವರಿಗೆ ಭಿಕ್ಷುಕರ ಪರಿಸ್ಥಿತಿ ಇಲ್ಲ ಅವರು ನಿಜವಾದ ಸ್ಥಿತಿವಂತರಲ್ಲ. ಬಡವರು ಮತ್ತು ಭಿಕ್ಷುಕರ ಏನಿದ್ದಾರೆ ಅವರ ಮೂಲಭೂತ ಬದಲಾವಣೆಗೆ ಸರ್ಕಾರದವರು ಏನಾದರೂ ಪ್ರಯತ್ನ ಮಾಡಬೇಕು. ನಮ್ಮ ದೇಶದಲ್ಲಿ ಲಕ್ಷೋಪಲಕ್ಷ ಜನ ನಿರುದ್ಯೋಗಿಗಳು ಏನಿದ್ದಾರೆ ಅವರೆಲ್ಲರೂ ಭಿಕ್ಷುಕರೆ, ಅರೆ ಉದ್ಯೋಗದಲ್ಲಿರತಕ್ಕವರು ಕೂಡ ಭಿಕ್ಷುಕರೇ. ಯಾರು ಭಿಕ್ಷುಕರು ಅಲ್ಲ ಎಂದು ಹೇಳುತ್ತಾರೆ

(ಶ್ರೀ ಕೋಣಂದೂರು ಲಿಂಗಪ್ಪ)

ಅವರು ನನಗೆ ವೇಗವಾಗಿ ತಿಳಿಸಬೇಕು. ನನ್ನ ಡೆಫಿನಿಷನ್ ಪ್ರಕಾರ ಈ ವಿಧೇಯಕದ ಮುಖಾಂತರ ಜನಗಳ ಕಣ್ಣೊರೆಸುವುದಕ್ಕೆ ವಿಫಲ ಪ್ರಯತ್ನವನ್ನು ಸರ್ಕಾರ ಮಾಡಿದೆ ಎಂದು ಹೇಳಬಹುದು. ಭಿಕ್ಷುಕರ ಭಿಕ್ಷಾಟನೆಯನ್ನು ನಿರೋಧಿಸತಕ್ಕ ಒಂದು ಕಾಯಿದೆಯನ್ನು ತರಬೇಕು ಎನ್ನುವ ಭಾವನೆಯಿಂದ ಈ ವಿಧೇಯಕವನ್ನು ತಂದಿದ್ದಾರೆಯೇ ಹೊರತು ನಿಜವಾಗಿ ಭಿಕ್ಷಾಟನೆಯನ್ನು ನಿರ್ಮೂಲ ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ತಂದಿಲ್ಲ. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ವೈಕ್ತಿಕ ಜಂಟಸ್ವಾಮಿಯವರು ಭಿಕ್ಷುಕರ ಮೂಲಭೂತ ಬದಲಾವಣೆಗೆ ಪ್ರಯತ್ನ ಮಾಡಬೇಕು. ಈ ಭಿಕ್ಷೆ ಎನ್ನುವುದು ದಾಸರು ಮತ್ತು ಶರಣ ಕಾಲದಿಂದಲೂ ಬಂದಿದೆ. ದಾಸ ಪರಂಪರೆಯಿಂದ ಬಂದಂತಹ ಜನ ಏವು ದಾಸ್ಯ ಶೃಂಖಲೆಯಿಂದ ನಮ್ಮ ಜನ ನೊಂದಿದ್ದಾರೆ. ಆದ್ದರಿಂದ ಈ ಭಿಕ್ಷುಕರ ಭಿಕ್ಷಾಟನೆಯನ್ನು ನಿರ್ಮೂಲನ ಮಾಡುವುದಕ್ಕೆ ಒಂದು ಮೂಲಭೂತ ಬದಲಾವಣೆಯನ್ನು ಮಾಡಿ ಪ್ರತಿಯೊಬ್ಬ ಮನುಷ್ಯನ ದಾಸ್ಯವನ್ನು ಹೋಗಲಾಡಿಸಿ ಸ್ವಾಭಿಮಾನದ ಮನುಷ್ಯನನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಈ ಜನಗಳಿಗೆ ಆರ್ಥಿಕ ಬಲಬರಬೇಕು, ಅಂಥಾ ಯೋಜನೆಯನ್ನು ರೂಪಿಸಬೇಕು. ಕೇವಲ ಆಡಂಬರಕ್ಕೆ ಒಂದು ವಿಧೇಯಕವನ್ನು ತಂದಿದ್ದಾರೆ. ನಮ್ಮ ರಾಷ್ಟ್ರದ ಇತಿಹಾಸವನ್ನು ನೋಡಿದಾಗ ಇದು ಎಷ್ಟು ಹಾಸ್ಯಾಸ್ಪದವಾದ ವಿಧೇಯಕ ಎಂದು ಮನಗಾಣುವುದಕ್ಕೆ ಸಾಧ್ಯ. ಭಿಕ್ಷುಕರ ಮೂಲಭೂತ ಸಮಸ್ಯೆಯನ್ನು ನಿವಾರಣೆ ಮಾಡುವಂಥಾದ್ದಾಗಿದ್ದರೆ ಈ ವಿಧೇಯಕವನ್ನು ತಂದಿದ್ದು ಸಾರ್ಥಕವಾಗುತ್ತಿದ್ದ. ಮೂಲಭೂತ ಸಮಸ್ಯೆಯನ್ನು ಪರಿಹಾರ ಮಾಡುವ ಬಗ್ಗೆ ಗರೀಬಿ ಹಠಾವೋ ಬರಿ ಘೋಷಣೆಯಲ್ಲಿ ನಡೆದಿದೆ. ಸಮಾಜವಾದದಲ್ಲಿ ವಿಕೇಂದ್ರೀಕರಣ ನೀತಿಯನ್ನು ಅನುಸರಿಬೇಕು. ವಿಕೇಂದ್ರೀಕರಣ ನೀತಿಯನ್ನು ಅನುಸರಿಸುವ ರೀತಿಯಲ್ಲಿ ಯೋಜನೆಯನ್ನು ಸರ್ಕಾರದವರು ಅಳವಡಿಸಿದ್ದೀರಾ ? ನಮ್ಮ ದೇಶದಲ್ಲಿ ೨೦೦ಕ್ಕೆ ೯೯ ಜನ ಭಿಕ್ಷುಕರೇ ಆಗಿದ್ದಾರೆ ಎಲ್ಲರನ್ನೂ ಭಿಕ್ಷುಕರನ್ನಾಗಿ ಮಾಡತಕ್ಕ ಪರಿಸ್ಥಿತಿಗೆ ಸರ್ಕಾರದವರು ದೇಶವನ್ನು ತಂದಿಟ್ಟಿದ್ದಾರೆ. ಸರ್ಕಾರದವರು ಮೂಲಭೂತ ಬದಲಾವಣೆಯನ್ನು ಕುರಿತು ಸರ್ಕಾರದವರು ಯೋಚನೆ ಮಾಡಬೇಕು ಬರಿ ಕಣ್ಣೊರೆಸುವ ಇಂಥಾ ವಿಧೇಯಕವನ್ನು ಏತಕ್ಕೋಸ್ಕರ ಇಲ್ಲಿ ತಂದಿದ್ದೀರಿ ? ಹಿರಿಯಂಕನ ಚಾಳಿ ಮಸಮಕ್ಕಳಿಗೆಲ್ಲಾ ಎನ್ನುವಂತೆ ಈಗ ಕಳೆದ ೨೫ ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಯಾವ ಜಾಡಿನಲ್ಲಿ ನಡೆಯುತ್ತಿದೆ ಎನ್ನುವುದಕ್ಕೆ ಸಾಕ್ಷಿಯಾಗಿ ಈ ವಿಧೇಯಕ ಬಂದಿದೆಯೇ ಹೊರತು ಹೊಸದೇನೂ ಅಲ್ಲ ಶ್ರೀಮಾನ್ ವೈಕ್ತಿಕ ಜಂಟಸ್ವಾಮಿಯವರ ಸರ್ಕಾರದವರಿಗೆ ನಿಜವಾಗಿ ಭಿಕ್ಷುಕರ ಭಿಕ್ಷಾಟನೆಯನ್ನು ನಿರ್ಮೂಲ ಮಾಡಬೇಕು ಎನ್ನತಕ್ಕಂಥಾ ಪ್ರಾಮಾಣಿಕತೆ, ಕಳಕಳಿ ಇದ್ದರೆ ನಿರುದ್ಯೋಗಿಗಳು, ಬಡವರು, ಅಶಿಕ್ಷಿತರುದ್ಯೋಗದಲ್ಲಿರತಕ್ಕವರು, ಕೃಷಿಯ ಕೂಲಿಕಾರರು ಸಾಮಾನ್ಯ ರೈತರು, ಮತ್ತು ಗೇಣಿದಾರರು ಇವರುಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನ ಮಾಡಬೇಕು. ಆತ್ಮ ಗೌರವವನ್ನು ಹುಟ್ಟಿಸುವಂಥ ಒಂದು ವಾತಾವರಣವನ್ನು ಸೃಷ್ಟಿ ಮಾಡುವುದರ ಮೂಲಕ ಒಂದು ಸಾರ್ಥಕವಾದ ಕೆಲಸವನ್ನು ಮಾಡಬೇಕೇ ಹೊರತು ಇಂಥಾ ಒಂದು ವಿಧೇಯಕವನ್ನು ತಂದು ಕಣ್ಣೊರೆಸುವುದಕ್ಕೆ ಪ್ರಯತ್ನ ಮಾಡಬಾರದು.

ಹಾಗೆಯೇ ನಮ್ಮ ಜನರೂ ಸಹ ಭಿಕ್ಷಾಟನೆ ಮಾಡಬಾರದು. ನನಗೆ ತಿಳಿದಂತೆ ನಮ್ಮ ಕೆನ್ನಡಿಗರು ಸಾಧು ಜನರು. ಗೋವಿನ ರೀತಿಯಲ್ಲಿ ಇದ್ದಾರೆ. ಮುಂದೆ ಬಂದರೆ ಹಾಯುವುದಿಲ್ಲ ಹಿಂದೆ ಬಂದರೆ ಒದೆಯುವುದಿಲ್ಲ ಇಂತಹ ಜನರು ಕಳೆದ ವಾರವಿಡೀ ಚಳವಳಿಗೆ ಜ್ವಾಲಾಮುಖಿಗಳಾಗಿ ಬಿಟ್ಟಿದ್ದಾರೆ. ನಮ್ಮ ದೇಶದ ಚರಿತ್ರೆಯಲ್ಲಿ ಇದೇ ಪ್ರಥಮ ಭಾರಿ ಈ ರೀತಿ ನಡೆದಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ಒಂದು ವಾರವಲ್ಲ, ಎರಡು ಮೂರು ದಿವಸಗಳು ಮಾತ್ರ.

ಶ್ರೀ ಕೋಣಂದೂರು ಲಿಂಗಪ್ಪ —ಆ ವಿಚಾರದಲ್ಲಿ ನಂತರ ನಾನು ಮಾತನಾಡುತ್ತೇನೆ. ಮುಖ್ಯವಾಗಿ ಈ ಭಿಕ್ಷೆ ಬೇಡುವುದು ಏನಿದೆ, ಇದು ಹೇಯವಾದ ಕೆಲಸ ಎಂಬ ಭಾವನೆ ನಮ್ಮ ಜನರಲ್ಲಿ ಬೆಳೆಯಬೇಕು. ಆದರೆ ಕಳೆದ ೨೫ ವರ್ಷಗಳಿಂದ ಇಂತಹ ಒಂದು ಭಾವನೆಯನ್ನು ಜನರಲ್ಲಿ ಉದ್ದೀಪನಗೊಳಿಸುವುದಕ್ಕೆ, ಪ್ರಚೋದನೆ ಮಾಡುವುದಕ್ಕೆ ನೆರವಾಗುವಂತಹ ಕೆಲಸಗಳನ್ನು ನಮ್ಮ ಸರ್ಕಾರಗಳು ಸೃಷ್ಟಿ ಮಾಡಲಿಲ್ಲ ಈ ರೀತಿ ಮಾಡದಿರುವುದಕ್ಕಾಗಿ, ಆ ಒಂದು ಪಾಪಕ್ಕೆ ಮತ್ತು ಆ ಒಂದು ಶಾಪಕ್ಕೆ ನಮ್ಮ ಸರ್ಕಾರಗಳು ಪಾತ್ರವಾಗಿವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ತಾವಿರತಕ್ಕಂಥ ವಿಧೇಯಕ ಕೂಡ ಕಣ್ಣೊರೆಸುವ ವಿಧೇಯಕವಾಗಿದೆ. ಭಿಕ್ಷೆ ಬೇಡುವವನ್ನು ಹಿಡಿಯುವವರು ಯಾರಿದ್ದಾರೆ, ಅವರೂ ಕೂಡ ಒಂದು ರೀತಿಯಲ್ಲಿ ಭಿಕ್ಷೆ ಮಾಡುವವರೇ ಆಗಿದ್ದಾರೆ. ಈ ಭಿಕ್ಷಾಟನೆಯನ್ನು ಹೋಗಲಾಡಿಸದೇ ಇರುವುದಕ್ಕಾಗಿ ಇಷ್ಟಿಯವರೆಗೆ ಸರ್ಕಾರ ನಡೆಸಿದವರು ಮುಖ್ಯವಾಗಿ ಜೈಲಿನಲ್ಲಿರಬೇಕು. ಕಳೆದ ೨೫ ವರ್ಷಗಳಿಂದ ಇದಕ್ಕೆ ಒಂದು ವ್ಯವಸ್ಥೆಯನ್ನು ರೂಪಿಸದೇ ಇರತಕ್ಕಂಥ ಕಾಂಗ್ರೆಸ್ ಸರ್ಕಾರದ

ಜನರು ಜೈಲಿನಲ್ಲಿರಬೇಕೇ ಹೊರತು, ಭಿಕ್ಷೆ ಬೇಡುವ ಜನರು ಜೈಲಿನಲ್ಲಿರಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ. ಏಕೆಂದರೆ ತಾವು ಜನರನ್ನು ಈ ಒಂದು ಪರಿಸ್ಥಿತಿಗೆ ತಂದೊಡ್ಡಿದ್ದೀವಿ. ಆದಕಾರಣ ತಾವು ಮೂಲಭೂತವಾದಂಥ ಬದಲಾವಣೆಗೆ ಪ್ರಯತ್ನ ಮಾಡಬೇಕೇ ಹೊರತು, ಇಂತಹ ಮೊಸಳೆ ಕಣ್ಣೀರನ್ನು ಸುರಿಸುವಂತಹ ಮಸೂದೆಯಿಂದ ಯಾವ ಪ್ರಯೋಜನವೂ ಆಗುವುದಿಲ್ಲವಾದ್ದರಿಂದ ಈ ಒಂದು ವಿಧೇಯಕವನ್ನು ವಾಪಸ್ ತೆಗೆದುಕೊಂಡು ಬಿಡುವುದು ಯೋಗ್ಯ ಮತ್ತು ಸುಸಂಸ್ಕೃತವಾದಂಥ ಮಾರ್ಗವೆಂದು ತಮ್ಮಲ್ಲಿ ನಿವೇದಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಪುಟ್ಟಸ್ವಾಮಿ (ವಂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ಪೂಜ್ಯ ಸಭೆಯ ಮುಂದೆ ಇತಕ್ಕಂಥ ಭಿಕ್ಷಾಟನಾ ನಿರೋಧ ವಿಧೇಯಕವನ್ನು ಸ್ವಾಗತಿಸುತ್ತಾ, ಇಂತಹ ಒಂದು ವಿಧೇಯಕದ ಅವಶ್ಯಕತೆ ಇತ್ತು ಎಂದು ನಾನು ಹೇಳುತ್ತೇನೆ. ಏಕೆಂದರೆ ರಾಜ್ಯ ಪುನರ್ವಿಂಗಡಣೆಯಾದ ಮೇಲೆ ಅನೇಕ ಭಾಗಗಳು ನಮ್ಮ ರಾಜ್ಯಕ್ಕೆ ಬಂದು ಸೇರಿದವು. ಆ ಭಾಗಗಳಲ್ಲಿ ಬೇರೆ ಬೇರೆ ವಿಧದ ವಿಧೇಯಕಗಳು ಜಾರಿಯಲ್ಲಿ ಇದ್ದವು. Bombay Beggars Act of 1945 ; Prevention of Beggary Act of 1950 of Hyderabad ; Madras Prevention of Beggary Act of 1945 ; Mysore Prohibition of Beggary Act, 1944 ; ಈ ರೀತಿ ಬೇರೆ ಬೇರೆ ವಿಧೇಯಕಗಳು ಇದ್ದದರಿಂದ ನಮಗೆ ಬಹಳ ಅನಾನುಕೂಲವಾಗುತ್ತಿತ್ತು. ಈ ವಿಚಾರ ಸಭೆಯ ಮಾನ್ಯ ಸದಸ್ಯರಿಗೂ ಸಹ ಗೊತ್ತಿದೆ. ಈ ಭಿಕ್ಷಾಟನೆಯನ್ನು ನಮ್ಮ ರಾಜ್ಯದಲ್ಲಿ ತಪ್ಪಿಸಬೇಕು ಎಂಬ ಬಗ್ಗೆ ನಾನೇ ಒಂದು ನಿರ್ಣಯವನ್ನು ತಂದಿದ್ದೆ. ಆದರೆ ಕಾರಣಾಂತರದಿಂದ ಅದು ಪಾಸಾಗಲಿಲ್ಲ. ಈಗ ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರಿಗೇ ಈ ಬಿಲ್ಲನ್ನು ಈ ಸಭೆಯ ಮುಂದೆ ಇಡುವ ಅವಕಾಶ ದೊರಕಿದ್ದಕ್ಕೆ, ನಾನು ಅವರನ್ನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ. ನಮ್ಮ ದೇಶದಲ್ಲಿ ಭಿಕ್ಷೆ ಬೇಡುವ ಕೆಲಸ ಏನಿಡೆ, ಇದು ಕನಕರವಾದುದು ಎಂದು ನನ್ನ ವೈಯಕ್ತಿಕವಾದ ಭಾವನೆಯಾಗಿದೆ ನಮ್ಮ ದೇಶದ ಜನರು ಬೇರೆ ದೇಶಗಳ ಕಡೆಗೆ ತಲೆಯೆತ್ತಿ ನೋಡಬೇಕು. ಪರದೇಶಗಳಲ್ಲಿ ಭಿಕ್ಷಾಟನೆ ಪದ್ಧತಿಯೇ ಇಲ್ಲ. ಆದರೆ ನಮ್ಮ ದೇಶದಲ್ಲಿ ಭಿಕ್ಷೆ ಬೇಡುವವರು ಜಾಸ್ತಿಯಾಗಿರುವುದಕ್ಕೆ ಕಾರಣ ಭಿಕ್ಷೆ ಕೊಡುವವರು ಜಾಸ್ತಿಯಾಗಿರುವುದು ಸಂಪ್ರದಾಯದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ, ಪೋಟೋಗಳನ್ನು ಹಿಡಿದುಕೊಂಡು ಭಿಕ್ಷೆ ಬೇಡಲು ಬಂದಾಗ, ಭಿಕ್ಷೆ ಕೊಡದಿದ್ದರೆ ಒಳ್ಳೆಯದು ಎಂಬತಕ್ಕಂಥ ಆಳುಕು ನಮ್ಮ ಮನಸ್ಸಿನಲ್ಲಿ ಬರುತ್ತದೆ. ಮತ್ತು ಆ ಸಮಯದಲ್ಲಿ ನಮ್ಮ ಹತ್ತಿರ ಕಾಸು ಏನಾದರು ಇಲ್ಲದಿದ್ದರೆ, ಅವರಿಗೆ ಕೊಡಲು ಕಾಸು ಇಲ್ಲವಲ್ಲಾ ಎಂಬತಕ್ಕಂಥ ಸಂಕಟ ಕೂಡ ನಮಗೆ ಆ ಸಂದರ್ಭದಲ್ಲಿ ಉಂಟಾಗುತ್ತದೆ. ನಮ್ಮ ದೇಶ ಆಧ್ಯಾತ್ಮಿಕ ದೇಶವಾದ್ದರಿಂದ ಈ ಒಂದು ಭಾವನೆ ನಮ್ಮಲ್ಲಿ ಬಂದಿರಬಹುದು. ಈ ಭಿಕ್ಷಾಟನೆ ಮಾಡುವ ಕೆಲಸ ಏನಿದೆ, ಇದು ಪರಿಶ್ರಮದ ತರುವ ವೃತ್ತಿಯಲ್ಲ. ಸುಖೀ ರಾಜ್ಯವನ್ನು ಸ್ಥಾಪನೆ ಮಾಡಬೇಕೆಂದು ಹೇಳುತ್ತಿರುವಾಗ, ಸಮಾಜವಾದದ ತತ್ವಗಳನ್ನು ಒಪ್ಪಿಕೊಂಡಿರುವಾಗ ಈ ಭಿಕ್ಷಾಟನೆಯೆಂಬ ಪಿಡುಗನ್ನು ಮೊದಲು ತಪ್ಪಿಸಬೇಕು. ಇದು ದಕ್ಷವಾದ ಸರ್ಕಾರ ಎನಿಸಿಕೊಳ್ಳಬೇಕಾದರೆ, ಇದನ್ನು ಜಾರಿಗೆ ತರಲು ಏನೇ ಅಡ್ಡಿ ಆತಂಕಗಳು ಬಂದರೂ ಸಹ ಅದಕ್ಕೆ ಗಮನ ಕೊಡದೆ ಇದನ್ನು ನಮ್ಮ ದೇಶದಲ್ಲಿ ಭಿಕ್ಷಾಟನೆಯನ್ನು ನಿಷೇಧ ಮಾಡಬೇಕು. ಭಿಕ್ಷಾಟಣೆಯನ್ನು ಹೋಗಲಾಡಿಸಲು ಏನೇನು ಕ್ರಮಗಳನ್ನು ಕೈಕೊಳ್ಳಬೇಕಾಗುತ್ತದೋ, ಆ ಬಗ್ಗೆ ಸೂಕ್ತವಾದಂಥ ಕಲಂಗಳನ್ನು ರಚಿಸಿ ಅದನ್ನು ರೂಲ್ಸ್‌ನಲ್ಲಿ ಅಳವಡಿಸಬೇಕು. ಮಾನ್ಯ ಶಾಮಣ್ಣನವರು ಸ್ಟೇಟ್ ಬೆಗ್ಗರ್ಸ್ ರಿಲೀಫ್ ಕಮಿಟಿಯಲ್ಲಿದ್ದಾರೆ. ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಸೆಂಟ್ರಲ್ ಬೆಗ್ಗರಿ ಆಕ್ಟ್ ಏನಿದೆ, ಅದನ್ನು ಅನುಸರಿಸುವುದರ ಮೂಲಕ, ನಮ್ಮ ರಾಜ್ಯದ ಪ್ರತಿ ತಾಲ್ಲೂಕ್‌ನಲ್ಲಿಯೂ ಭಿಕ್ಷಾಟನೆಯನ್ನು ನಿಷೇಧಿಸುವುದಕ್ಕೆ ಏರ್ಪಾಡುಗಳನ್ನು ಮಾಡಬೇಕು. ಅತಿ ಶೀಘ್ರದಲ್ಲಿಯೇ ಇದನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ —ಇಂದಿರಾಗಾಂಧಿಯವರ ಪೋಟೋವನ್ನು ಹಾಕಿಕೊಂಡು ಬೆಗ್ಗರಿ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಜೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪನವರ ಪೋಟೋವನ್ನು ಸಹ ಹಾಕಿಕೊಂಡು ಭಿಕ್ಷೆ ಬೇಡುತ್ತಿದ್ದಾರೆ. ಈಗ ಬಡತನದಿಂದ ಬಂದಿರುವವರಲ್ಲಿ, ಹಿಂದುಳಿದ ವರ್ಗದವರಲ್ಲಿ ಎಂಜಲು ಅನ್ನವನ್ನು ತಿನ್ನುವ ಪದ್ಧತಿ ಏನೂ ಜಾರಿಯಲ್ಲಿದೆ, ಅದನ್ನು ಮೊದಲು ನಿಷೇಧ ಮಾಡಬೇಕು. ಏಕೆಂದರೆ ಇದರಿಂದ ಒಬ್ಬರಲ್ಲಿರುವ ಕುಷ್ಠ ರೋಗ ಇನ್ನೊಬ್ಬರಿಗೆ ತಗಲುವ ಅವಕಾಶವಿರುತ್ತದೆ. ಆದ್ದರಿಂದ ಎಂಜಲು ಅನ್ನವನ್ನು ತಿನ್ನುವ ಪದ್ಧತಿಯನ್ನು ಮೊದಲು ಹೋಗೆಲಾಡಿಸಬೇಕು. ಮತ್ತು ಅವರಿಗೆ ಸಂಪಾದನೆ ಮಾಡುವ ಮಾರ್ಗವನ್ನು ಕಲ್ಪಿಸಿಕೊಡಬೇಕು. ಇಂದು ನಮ್ಮ ದೇಶದಲ್ಲಿ ಒಂದು ದಿವಸಕ್ಕೆ ಭಿಕ್ಷಾಟನೆಯ ಮೂಲಕ ನೂರು ಪೈಸೆಯಿಂದ ಐನೂರು ಪೈಸೆಯವರೆಗೆ ಸಂಪಾದನೆ ಮಾಡುವ ಭಿಕ್ಷುಕರು

(ಶ್ರೀ ಜೆ. ಪಟ್ಟಸ್ವಾಮಿ)

ಇದ್ದಾರೆ. ಒಬ್ಬ ಭಿಕ್ಷುಕಿ ಇದೇ ರೀತಿ ಸಹಸ್ರಾರು ರೂಪಾಯಿಗಳನ್ನು ಸಂಪಾದನೆ ಮಾಡಿ ಇಟ್ಟಿದ್ದಳು ಎಂದು ನಾನು ಕೇಳಿದ್ದೇನೆ. ಒಂದು ರೀತಿಯಲ್ಲಿ ಇಂದು ಬಡವರಿಗಿಂತಲೂ ಈ ಭಿಕ್ಷಾಟಣೆ ಮಾಡುವವರು ಉತ್ತಮ ಸ್ಥಿತಿಯಲ್ಲಿ ಇದ್ದಾರೆ. ಇಂದು ನಮ್ಮ ರಾಜ್ಯದಲ್ಲಿ ನೆರೆ ರಾಜ್ಯಗಳಿಂದ ಬಂದವರೇ ಹೆಚ್ಚಾಗಿ ಭಿಕ್ಷಾಟನೆ ಮಾಡುತ್ತಿದ್ದಾರೆ ಆದರೆ ಹೊರ ರಾಜ್ಯಗಳಿಂದ ಬಂದವರು ಈ ವೃತ್ತಿಯನ್ನು ಅವಲಂಬಿಸಿ, ಹಣವನ್ನು ಸಂಪಾದನೆ ಮಾಡಿ ತಮ್ಮ ಊರುಗಳಿಗೆ ಮನಿಆರ್ಡರ್ ಮಾಡುತ್ತಿದ್ದಾರೆ. ಎಷ್ಟೋ ಜನರು ಇದೇ ಸಂಪಾದನೆಯಿಂದ ತಮ್ಮ ತಮ್ಮ ಸ್ವಂತ ಸ್ಥಳಗಳಲ್ಲಿ ಆಸ್ತಿಪಾಸ್ತಿ ಮಾಡಿಕೊಂಡಿದ್ದಾರೆ. ಇದನ್ನೆಲ್ಲಾ ವಿಮರ್ಶೆಮಾಡಿ ನೋಡುವುದಾದರೆ, ಈ ಭಿಕ್ಷಾಟಣೆಯನ್ನು ಮೊದಲು ತಪ್ಪಿಸುವುದು ಒಳ್ಳೆಯದು ಎಂದು ಹೇಳದೆ ವಿಧಿಯಿಲ್ಲ. ಮನುಷ್ಯನಿಗೆ ಇರತಕ್ಕಂಥ ಆತ್ಮಗೌರವ ಉಳಿಯಬೇಕಾದರೆ, ಒಂದು ದೇಶದ ಜನರು ಪ್ರಪಂಚದಲ್ಲಿ ತಲೆಯೆತ್ತಿ ನಡೆಯಬೇಕಾದರೆ ಈ ವೃತ್ತಿಯನ್ನು ಮೊದಲು ಸರ್ಕಾರದವರು ನಿಷೇಧ ಮಾಡಬೇಕು. ಮತ್ತು ಈ ವೃತ್ತಿಯನ್ನು ಅವಲಂಬಿಸಿರುವ ಎಲ್ಲಾ ಜನರು ಸನ್ಮಾರ್ಗದಲ್ಲಿ ನಡೆಯುವಂತೆ ಸರ್ಕಾರದವರು ಅವಕಾಶ ಮಾಡಿಕೊಡಬೇಕು ಈಗ ಭಿಕ್ಷೆ ಬೇಡುವ ಜನರೇನಿದ್ದಾರೆ, ಅವರು ಸನ್ಮಾರ್ಗ ಪ್ರವರ್ತಕರಾಗಬೇಕಾದರೆ, ಮಾನ್ಯ ಶಾಮಣ್ಣನವರು ಹೇಳಿದಂತೆ, ಒಳ್ಳೆಯ ಜನರನ್ನು ಬೋರ್ಡಿಗೆ ಸರ್ಕಾರದವರು ನಾಮಕರಣ ಮಾಡಬೇಕು. ಭಿಕ್ಷಾಟಣೆಯನ್ನು ನಿಜವಾಗಿಯೂ ತಪ್ಪಿಸಬೇಕೆಂದು ಯಾರಲ್ಲಿ ನಿಜವಾದ ಕಳಕಳಿ ಇರುತ್ತದೋ. ಯಾರಲ್ಲಿ ನಿಜವಾದ ಮಾನವೀಯತೆ ಇರುತ್ತದೋ ಅಂತಹವರು ಬೋರ್ಡ್ ಆಫ್ ವಿಜಿಟರ್ಸ್ ಆಗಿರಬೇಕು. ಇಂತಹವರಿಗೆ ಸರ್ಕಾರದವರು ಪ್ರೋತ್ಸಾಹ ಕೊಟ್ಟು ನಾಮಕರಣ ಮಾಡಬೇಕೇ ಹೊರತು, ಭಿಕ್ಷಾಟನೆಗೆ ಪ್ರೋತ್ಸಾಹ ಕೊಡುವವರನ್ನು ನೇಮಕ ಮಾಡಬಾರದು. ಈಗ ಬೆಗ್ಗರ್ಸ್ ಕಾಲೋನಿಯಲ್ಲಿ ಭಿಕ್ಷುಕರನ್ನು ನೋಡಿಕೊಳ್ಳುವ ಅಧಿಕಾರಿಗಳು ಏನಿದ್ದಾರೆ, ಅವರಲ್ಲಿ ಕೆಲವರು ಭಿಕ್ಷುಕರನ್ನು ಮತ್ತೆ ಭಿಕ್ಷೆ ಬೇಡಲು ಬಿಟ್ಟು, ಭಿಕ್ಷೆಯಲ್ಲಿ ಬಂದಿದ್ದರಲ್ಲಿ ಪಾಲು ಪಡೆಯುವವರೂ ಸಹ ಇದ್ದಾರೆಂದು ಕೇಳಿಬರುತ್ತೆ. ಇಂತಹವರನ್ನು ನೌಕರರನ್ನಾಗಿ ನೇಮಕ ಮಾಡುವುದು ಬೇಡ ಎಂದು ಹೇಳುತ್ತೇನೆ.

3-00 PM.

ಇದೊಂದು ಮುಖ್ಯ ಪ್ರಶ್ನೆ. ಇದರಲ್ಲಿ ಸರಕಾರ ತನ್ನ ಕರ್ತವ್ಯವನ್ನು ಸರಿಯಾಗಿ ಮಾಡಬೇಕು. ಇದರ ಬಗ್ಗೆ ಅನೇಕ ವಿವರಗಳನ್ನು ಈಗಾಗಲೇ ಸರಕಾರಕ್ಕೆ ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ ಇದನ್ನು ಯಾರ ಪ್ರಚೋದನೆಯಿಂದಲೂ ಮಾತನಾಡತಕ್ಕ ವಿಚಾರವಲ್ಲ, ಇಂದು ದೇಶದ ಪರಿಸ್ಥಿತಿ ಹೇಗಿದೆ ನೋಡಬೇಕು. ಧರ್ಮದ ಪರಿಸ್ಥಿತಿ ಬಹು ಕಾಲದಿಂದಲೂ ಬೆಳೆದು ಬರುತ್ತಿದೆ. ಇವೊತ್ತಿನ ದಿವಸ ಯಾರಾದರೂ ಮನೆ ಮುಂದೆ ಅನ್ನ ಬೇಕೆಂದು ಬಿಕ್ಷೆ ಬೇಡಲು ಬಂದರೆ ಮನೆಯಲ್ಲಿ ಇಂದಿನ ಪರಿಸ್ಥಿತಿಯಲ್ಲಿ ನೋಡಿದರೆ ಅಕ್ಕಿಯೇ ಇರುವುದಿಲ್ಲ, ಇವರಿಗೆ ಅನ್ನವನ್ನು ಎಲ್ಲಿಂದ ತರಲು ಸಾಧ್ಯ. ಒಟ್ಟಿನಲ್ಲಿ ಈ ಬಿಲ್ಲನ್ನು ತಂದಿರತಕ್ಕದ್ದು ಒಳ್ಳೆಯದು. ಭಿಕ್ಷುಕ ಮಕ್ಕಳಿಗೆ ವೃತ್ತಿ ಶಿಕ್ಷಣ ಕೊಡುವುದರ ಬಗ್ಗೆ ಆರು ತಿಂಗಳ ಕಾಲ ಶಿಕ್ಷಣ ಕೊಡಬೇಕೆಂದೂ ಇದೆ. ಆರುತಿಂಗಳು ಅವಕಾಶ ಸಾಲದು. ಇದನ್ನು ಒಂದು ವರ್ಷದಷ್ಟು ಎಂದು ಮಾಡಿದರೆ ಅವರು ಶಿಕ್ಷಣವನ್ನು ಕಲಿತು ಸ್ವಾವಲಂಬಿಗಳಾಗಲು ಅನುಕೂಲವಾಗುತ್ತದೆ, ಇಂತಹ ಒಂದು ಅವಕಾಶವನ್ನು ಇದರಲ್ಲಿ ಕಲ್ಪಿಸಿ ಕೊಡಬೇಕೆಂದು ಹೇಳುತ್ತೇನೆ. ಅಂಗವಿಕರಿಗೆ ಸಾಕಷ್ಟು ರಿಯಾಯಿತಿಗಳನ್ನು ಕೊಡುವುದಕ್ಕೆ ಈ ಬಿಲ್ಲಿನಲ್ಲಿ ಅವಕಾಶವನ್ನು ಆಳವಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಅಂಟುರೋಗ ಇರುವ ಭಿಕ್ಷುಕರನ್ನು ಇತರ ವರ್ಗದ ಭಿಕ್ಷುಕರ ಜೊತೆ ಸೇರಿಸದೆ ಇವರನ್ನು ಪ್ರತ್ಯೇಕವಾಗಿ ಇಡಲು ಏರ್ಪಾಡು ಮಾಡಬೇಕು. ಬೇರೆ ಐಸೊ ಲೇಷನ್ ಆಸ್ಪತ್ರೆ ಬಳಿ ರೋಗಿಗಳನ್ನು ಇಡುವಂತೆ ಇವರನ್ನೂ ಅಲ್ಲಿ ಇಡಲು ಕ್ರಮ ತೆಗೆದುಕೊಳ್ಳಬೇಕು, ಇತರ ಭಿಕ್ಷಕರುಗಳೊಡನೆ ಅಂಟುರೋಗದ ಭಿಕ್ಷಕರನ್ನೂ ಸೇರಿಸಿದರೆ ಅವರಿಗೂ ರೋಗಗಳು ಅಂಟಲು ಅವಕಾಶವಾಗುತ್ತದೆ ಇದನ್ನು ತಪ್ಪಿಸಬೇಕಾಗಿ ಮತ್ತು ಭಿಕ್ಷಕರು ದೇವಸ್ಥಾನದ ಹತ್ತಿರ ಹಾಗೂ ಧರ್ಮ ಸಂಸ್ಥೆಗಳ ಹತ್ತಿರ ರಥೋತ್ಸವದ ಕಾಲದಲ್ಲಿ ಭಿಕ್ಷೆ ಬೇಡುವುದನ್ನು ನಿಷೇಧಿಸಬೇಕು, ಇಲ್ಲಿ ಯಾವ ರೀತಿಯ ಭಿಕ್ಷುಕರೂ ಬರಲು ಅವಕಾಶ ಕೊಡಬಾರದು. ಇಷ್ಟು ಹೇಳಿ ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MOTION RE.—CONTEMPT OF THE HOUSE.

SRI D. DEVARAJ URS.- (Chief Minister) I beg leave of this House, Madam Speaker, to move the following resolution.—